ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಕೀಟ್ಸ್ ಕವಿಯ ಪ್ರಗಾಥಗಳು

ಎಸ್. ಕೃಷ್ಣಭಟ್ಟ

ಕೀಟ್ಸ್ ಕವಿಯ ಪ್ರಗಾಥಗಳು

ಎಸ್. ಕೃಷ್ಣಭಟ್ಟ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

KEATS KAVIYA PRAGATHAGALU (Keats' Odes) by S. Krishna Bhatta, Reader in English, Acharya Pathasala Evening College, Bangalore. Published by Prasaranga, Bangalore University, Bangalore. Pp. 48+viii

ಪ್ರಕಾಶಕರು :

ಹೆಚ್. ಆರ್. ದಾಸೇಗೌಡ

ನಿರ್ದೇಶಕರು

ಪ್ರಸಾರಾಂಗ

ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056

ಬೆಲೆ : 50 ಪೈಸೆ

ಮುದ್ರಣ :

ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ–ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವಶ್ಯಕ. ಪಾಠಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಮಾತ್ರ ವಿಶ್ವವಿದ್ಯಾಲಯಗಳ ಕಾರ್ಯವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆ ಹೊತ್ತು ವಿಶ್ವವಿದ್ಯಾಲಯಗಳು ಜ್ಞಾನ ಪ್ರಸಾರ ಕೇಂದ್ರಗಳಾಗಿ ಮುನ್ನಡೆಯಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ನಾಲ್ಕೈದು ವರ್ಷಗಳಿಂದ ನಗರದ ನಾನಾ ಸಂಘಸಂಸ್ಥೆಗಳಲ್ಲಿ, ಕಾರ್ಖಾನೆ ಕಾರ್ಮಿಕ ಕೂಟಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತ ಬಂದಿದೆ. ಆಯಾ ವಿಷಯಗಳಲ್ಲಿ ಪರಿಣತರಾದವರು ಭಾಷಣಗಳನ್ನು ನೀಡಿ, ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಮ್ಮೊಡನೆ ಸಹಕರಿಸುತ್ತಿರುವುದು ಸಂತಸದ ಸಂಗತಿ. ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ಜನತೆಯ ಕೈಸೇರಲೆಂದು ಈ ಕಿರುಹೊತ್ತಿಗೆಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಶ್ರೀಮಂತಿಕೆಯನ್ನು ಹೆಚ್ಚಿಸಿ, ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆಯಲ್ಲಿ ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನಸಾರೆ ಹಾರೈಸುತ್ತೇನೆ.

ಎಚ್. ನರಸಿಂಹಯ್ಯ

ಉಪಕುಲಪತಿ

ಅರಿಕೆ

"ಕೀಟ್ಸ್ ಕವಿಯ ಪ್ರಗಾಥಗಳು" (**Keats' Odes**) ಎಂಬ ಈ ಚಿಕ್ಕ ಪುಸ್ತಕವನ್ನು ನನ್ನ ಸಮಸ್ತ ಗುರುವರ್ಗಕ್ಕೆ ಅರ್ಪಿಸಿ, ಸಹೃದಯರ ಮುಂದೆ ಇಡುತ್ತಿದ್ದೇನೆ.

ಜಾನ್ ಕೀಟ್ಸ್ ಆಂಗ್ಲ-ಕಾವ್ಯೋದ್ಯಾನದಲ್ಲಿ ಬೇಗನೆ ಅರಳಿ ಕಂಪನ್ನು ಸೂಸಿ ಅಲ್ಪಾವಧಿಯಲ್ಲೇ ಬಾಡಿ ಹೋದ ಒಂದು ಕುಸುಮ. ಆತನ ಕವಿತೆಗಳಲ್ಲಿ ಪ್ರಗಾಥಗಳು (**Odes**) ತಮ್ಮದೇ ಆದ ಒಂದು ಸ್ಥಾನವನ್ನು ಗಳಿಸಿಕೊಂಡಿವೆ. ಹೆಚ್ಚಾಗಿ ಶಾಲಾ-ಕಾಲೇಜುಗಳಲ್ಲಿ ಓದಲು ಅವಕಾಶ ಲಭಿಸದ ಕನ್ನಡ ಸಹೃದಯ ವರ್ಗಕ್ಕೆ ಕೆಲವು ಪ್ರಗಾಥಗಳನ್ನು ಕವಿಯ ಜೀವನ, ಪ್ರಗಾಥದ ಲಕ್ಷಣಗಳೊಂದಿಗೆ ಸಾಮಾನ್ಯ ಪರಿಚಯ ಮಾಡಿಕೊಡುವ ಒಂದು ಚಿಕ್ಕ ಪ್ರಯತ್ನವಿದು. ಹಾಗೂ ಸಾಹಿತ್ಯದ ಅಭ್ಯಾಸಿಗಳಿಗೆ ತುಲನಾತ್ಮಕ ಅಧ್ಯಯನದಲ್ಲೂ ಸ್ವಲ್ಪ ಸಹಾಯವಾದಲ್ಲಿ ನಾನು ಧನ್ಯ.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ ಬೆಳಕಿಗೆ ತಂದಿರುವ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ನಾನು ಚಿರಋಣಿ.

ಇದರ ಕೆಲವು ಅಧ್ಯಾಯಗಳು ಲೇಖನಗಳ ರೂಪದಲ್ಲಿ 'ಕನ್ನಡ ಪ್ರಭ', 'ಕನ್ನಡ ನುಡಿ', 'ಮಲ್ಲಿಗೆ' ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುವು ; ಅವುಗಳ ಸಂಪಾದಕ ವರ್ಗವನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ಪುಸ್ತಕವನ್ನು ಉತ್ತಮಗೊಳಿಸಲು ಪ್ರಾಜ್ಞರು ಅಮೂಲ್ಯ ಸಲಹೆಗಳನ್ನು ನೀಡಬೇಕೆಂದು ವಿನಂತಿ.

ಏಪ್ರಿಲ್ 23, 1977

ಎಸ್. ಕೃಷ್ಣಭಟ್ಟ

ಪರಿವಿಡಿ

. ಜಾನ್ ಕೀಟ್ಸ್
(ಕ್ರಿ.ಶ. 1795–1821)

ಿ ಪರಿಚಯು

ಆಂಗ್ಲ ರೊಮ್ಯಾಂಟಿಕ್ ಪಂಥದ ಕವಿಪ್ರಮುಖರಲ್ಲಿ ಬ್ಬನಾದ ಜಾನ್ ಕೀಟ್ಸನು ಲಂಡನ್ನಿನ ಮೂರ್‌ಫೀಲ್ಡ್ಸ ಂಬಲ್ಲಿ ಕ್ರಿ.ಶ. 1795 ರಲ್ಲಿ ಜನಿಸಿದನು. ಈತನ ತಂದೆ ಬ್ಬ ಕುದುರೆ ಲಾಯದ ಮಾಲೀಕ. ಈತನು ಮೊದಲು ನ್ನಾಗಿ ಲ್ಯಾಟಿನ್ ಮತ್ತು ಇತಿಹಾಸದ ಜ್ಞಾನವನ್ನೂ, ಲ್ಪಮಟ್ಟಿಗೆ ಫ್ರೆಂಚ್ ಭಾಷೆಯ ಜ್ಞಾನವನ್ನೂ ಪಡೆದನು. ನಂತರ ಈತನನ್ನು ವೈದ್ಯಶಾಸ್ತ್ರದ ಶಿಕ್ಷಣಕ್ಕೆ ಸೇರಿಸ ಯಿತು. ಈ ನಡುವೆ ಸ್ಪೆನ್ಸರ್ ಕವಿಯ "ಫೇರೀ ಕ್ವೀನ್", ಪ್‌ಮನ್ ಮಾಡಿದ ಹೋಮರನ ಅನುವಾದ ಮುಂತಾದ ಂಥಗಳನ್ನು ಓದಿದ ಮೇಲೆ, ಅವನ ಮನಸ್ಸು ಸಾಹಿತ್ಯದ ತೆಗೆ ಬಲವಾಗಿ ವಾಲಿತು. ಇದರ ಪರಿಣಾಮವಾಗಿ, ವೈದ್ಯ ಜ್ಞಾನದ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರೂ ಆ ವೃತ್ತಿ ನ್ನು ಅವಲಂಬಿಸಲಿಲ್ಲ. ಅದಕ್ಕೆ ಬದಲಾಗಿ ಕಾವ್ಯಲೋಕಕ್ಕೆ ನ್ನು ಅರ್ಪಿಸಿಕೊಂಡನು. ಆ ವೇಳೆಗೆ ಅವನಿಗೆ 21 ರ್ಷ ವಯಸ್ಸು. ಆಮೇಲೆ ಅವನು ಬಾಳಿದ ಐದು ವರ್ಷ ಲ್ಲಿ ಆಂಗ್ಲ ಕಾವ್ಯಲೋಕಕ್ಕೆ ಸತತವಾಗಿ ಕಾಣಿಕೆಗಳನ್ನು ಡುತ್ತಾ, ಆಂಗ್ಲಕಾವ್ಯ ಗಗನದಲ್ಲಿ ಓರ್ವ ಪ್ರಮುಖ ರೆಯಾಗಿ ವಿಜೃಂಭಿಸಿದನು.

ಕೀಟ್ಸನು ಸಾಹಿತ್ಯ ಪ್ರಪಂಚಕ್ಕೆ ತಿರುಗಿದಾಗ ಅವನಿ ಮೊಟ್ಟ ಮೊದಲು ದೊರೆತ ಆಪ್ತ ಸ್ನೇಹಿತರು ಹ್ಯಾಜ್ಲಿಟ್ ಮತ್ತು ಲೇ ಹಂಟ್. ಇವರ ಮೂಲಕ ಈತನಿಗೆ ಇನ್ನೊಬ್ಬ ಸಮಕಾಲೀನ ಕವಿವರ್ಯನಾದ ಶೆಲ್ಲಿಯ ಸಖ್ಯವುಂಟಾಯಿತು ಅಲ್ಲದೆ 'ಎಗ್ಸಾಮಿನರ್' ಎಂಬ ಪತ್ರಿಕೆಯಲ್ಲಿ ಅವನ ಸಾನೆಟ್ 1816 ರಲ್ಲಿ ಪ್ರಕಟವಾಯಿತು. ಶೆಲ್ಲಿಯ ಸಹಾಯದಿಂದ 1817 ರಲ್ಲಿ ಪ್ರಕಟವಾದ ಅವನ ಕವನಸಂಕಲನಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯಲಿಲ್ಲ. ಅಷ್ಟೊ ಅಲ್ಲದೆ, ಮೂರನೇ ವರ್ಷ ಪ್ರಕಟವಾದ 'ಎಂಡಿಮಿಯಾನ್' ಕಾವ್ಯದ ದೋಷ ಗಳನ್ನೂ ಅನೇಕರು ಎತ್ತಿಹಿಡಿದರು ; ಮತ್ತು ಲಿಬರಲ್ ಪಂಥದ ಲೇ ಹಂಟ್‌ನೊಡನೆ ಸಖ್ಯ ಬೆಳೆಸಿದ್ದಕ್ಕಾಗಿಯೂ ಅದು ಉಗ್ರ ಟೀಕೆಗಳಿಗೆ ಒಳಗಾಯಿತು. ಅದೇ ಸಮಯದಲ್ಲಿ ಅವನು ರಚಿಸಲು ಪ್ರಾರಂಭಿಸಿದ ಕವನ 'ಹೈಪೀರಿಯಾನ್' ಎಂಬುದು 1819 ರಲ್ಲಿ 'ದಿ ಈವ್ ಆಫ್ ಸೈಂಟ್ ಆ್ಯಗ್ನಿಸ್', 'ಲಾ ಬೆಲ್ ದಾಮ್ ಸಾನ್ಸ್ ಮರ್ಸಿ' (ಹೃದಯ ಹೀನ ಸುಂದರಿ) ಎಂಬ ಕವನಗಳು ರಚಿತವಾದುವು. ಬಹುಮಟ್ಟಿಗೆ ಆ ವರ್ಷವೇ ಸುಪ್ರಸಿದ್ಧ ಪ್ರಗಾಥ (Odes)ಗಳನ್ನು ರಚಿಸಿದನು ; ಅನಂತರ ಬಂದ ಕವನಗಳು 'ಇಸಬೆಲ್ಲ' ಮುಂತಾದುವು. ಅವನು ನಾಟಕ ಕ್ಷೇತ್ರದಲ್ಲಿ ಮಾಡಿದ ಪ್ರಯೋಗದ ಫಲಿತಾಂಶ, 'ಓಥೊ ದಿ ಗ್ರೇಟ್', 'ಕಿಂಗ್ ಸ್ಟೀಫೆನ್' ಎಂಬ ನಾಟಕಗಳ ಹಾಗೂ 'ಕ್ಯಾಪ್ ಅಂಡ್ ಬೆಲ್ಸ್' ಎಂಬ ವಿಕಟ ಕವಿತೆಯ ರಚನೆ.

ಈ ನಡುವೆ ಫ್ಯಾನಿ ಬ್ರಾನ್ ಎಂಬುವಳ ಮೇಲೆ ಕೀಟ್ಸನಿಗೆ ತುಂಬಾ ಪ್ರೇಮ ಬೆಳೆಯಿತು. ಅದೇ ಕಾಲದಲ್ಲಿ ಕ್ಷಯರೋಗದಿಂದ ತುತ್ತಾದ ತನ್ನ ಸಹೋದರನ ಶುಶ್ರೂಷೆ ಮಾಡಿದುದರ ದೆ

ಬಿಂದ ಈತನಿಗೂ ಆ ಭಯಂಕರ ರೋಗ ತಗುಲಿತು. ಈತನು
ದ್ಯವೃತ್ತಿಗೆ ಹೋಗದಿದ್ದುದಕ್ಕಾಗಿ ಹಿರಿಯರೊಡನೆ ಆಗಿರ
ಹುದಾದ ವೈಮನಸ್ಯ, 'ಎಂಡಿಮಿಯಾನ್' ಕಾವ್ಯದ ಮೇಲೆ
ಂದ ಕಟುಟೀಕೆಗಳು, ಸಹೋದರನನ್ನು ಕಳೆದುಕೊಂಡಿದ್ದು,
ನಸು ಪ್ರೇಮಿಸಿದ್ದ ಫ್ಯಾನಿ ಬ್ರಾನಳನ್ನು ಮದುವೆಯಾಗಲು
ಂದ ಅಡ್ಡಿಗಳು— ಇವುಗಳಲ್ಲಿ ಯಾವುದರ ದುಷ್ಪರಿಣಾಮ
ಪ್ಪಾಯಿತೋ ಈತನ ಕ್ಷಯರೋಗ ಪ್ರಬಲಿಸಿತು. ಇಟಲಿಯ
ಖಿಯ ಹವೆಯಿಂದ ಅನುಕೂಲವಾಗಬಹುದೆಂದು ಅಲ್ಲಿಗೆ
ಹೋದನು ; ಆದರೂ ನಿಷ್ಫಲವಾಯಿತು. 1821ರಲ್ಲಿ
ರೋಮ್ ಪಟ್ಟಣದಲ್ಲಿ ಮರಣ ಹೊಂದಿದನು. ಈತನ ಶವ
ಂಸ್ಕಾರ ನಡೆದ ರೋಮ್‌ನ ರುದ್ರಭೂಮಿಯಲ್ಲಿರುವ ಶಿಲಾ
ೇಖ ಹೀಗಿದೆ : "ಯಾರ ಹೆಸರನ್ನು ನೀರಿನಲ್ಲಿ ಬರೆಯ
ಾಯಿತೋ ಆ ವ್ಯಕ್ತಿಯು ಮಲಗಿರುವನಿಲ್ಲಿ" ('Here lies
ne whose name was writ in water'); ವಿನಯ
ೂರ್ವಕವಾದ, ಆದರೆ ಸ್ವಲ್ಪಮಟ್ಟಿಗೆ ಕಟುವಾದ ಈ ಸಾಲನ್ನು
ವಿಯೇ ಬದುಕಿದ್ದಾಗ ರಚಿಸಿದ್ದನಂತೆ.

ರೊಮ್ಯಾಂಟಿಕ್ ಪಂಥದ ಕೀಟ್ಸನು ಇಂದ್ರಿಯಾನು
ವಗಳ ವರ್ಣನೆಗೆ ಎತ್ತಿದ ಕೈ. ಅವನ ಮನಸ್ಸು ಅಷ್ಟಾಗಿ
ತ್ವವಿಚಾರಗಳ ಕಡೆ ಹೋಗುತ್ತಿರಲಿಲ್ಲ. ಭಾವನೆಗಳನ್ನು
ೂಕ್ಷ್ಮವಾಗಿ ಗ್ರಹಿಸಿ, ಒಪ್ಪವಾಗಿ ಜೋಡಿಸಿ, ಸಹೃದಯರಿಗೆ
ಂಚುವ ಲೇಖನಿ ಅವನದು. ಜಗತ್ತಿನ ಸೌಂದರ್ಯವನ್ನು
ನ್ನಾಗಿ ಆರಾಧಿಸಿ ಅಭಿವೃದ್ಧಿಗೊಳಿಸುವ ಹಂಬಲ ಅವನದು.
ಬ್ಲ್ಯು. ಬಿ. ಯೇಟ್ಸ್ ಹೇಳುವಂತೆ, "ಸಮಕಾಲೀನ ಕವಿಯು
ತ್ಯದಿಂದ ಪ್ರಾರಂಭಿಸಿ ಸೌಂದರ್ಯದತ್ತ ನಡೆದರೆ, ಕೀಟ್ಸನು

ಸೌಂದರ್ಯದಿಂದ ಪ್ರಾರಂಭಿಸಿ ಸತ್ಯದತ್ತ ನಡೆಯುತ್ತಾ
ಕೀಟ್ಸನ ಪ್ರಕಾರ ಸೌಂದರ್ಯವೆಂದರೆ ಬೇಡವಾದದ್ದನ್ನು ದ
ಮಾಡುವುದಲ್ಲ; ತದೇಕಚಿತ್ತತೆ ಹಾಗೂ ಮಾನಸಿಕ ಚ
ವಟಿಕೆಯಿಂದ ಪಡೆದ ಅಂಶಗಳನ್ನು ಒಟ್ಟಾಗಿ ಬೆಸೆಯುವುದ
ಅವನು ತನ್ನ ಅಭಿಪ್ರಾಯಗಳನ್ನು ಮಂಡಿಸುವುದೂ ಇ
ಯಾವ ತೀರ್ಮಾನಕ್ಕೂ ಬರುವುದೂ ಇಲ್ಲ." ಸೌಂದರ
ರಾಧನೆಯೇ ಕೀಟ್ಸನ ಕಾವ್ಯದ ಉದ್ದೇಶ ಹಾಗೂ ಸಂದೇ
"ಸುಂದರ ವಸ್ತುವು ಸದಾ ಆನಂದದಾಯಕ" (A thing
beauty is a joy for ever) ಮತ್ತು "ಸೌಂದರ್ಯವೇ ಸ
ಸತ್ಯವೇ ಸೌಂದರ್ಯ" (Beauty is truth, truth beaut
ಎಂದು ಜಗತ್ತಿಗೆ ಸಾರಿದ ಕವಿ ಅವನು.

ಪ್ರಗಾಥ, ಅದರ ಲಕ್ಷಣಗಳು

ಈಗ ನಾವು 'ಪ್ರಗಾಥ' (Ode) ಎಂದು ಕರೆಯುವ ಪದ್ಯ ಕಾರಕ್ಕೆ ತನ್ನದೇ ಆದ ಚರಿತ್ರೆಯುಂಟು. ಗ್ರೀಕ್ ಭಾಷೆಯಲ್ಲಿ ಡ್' (ಪ್ರಗಾಥ) ಎಂದರೆ ಒಂದು ಗೀತವಾದ್ಯಕ್ಕೆ ಸರಿಯಾಗಿ ಡಬಹುದಾದ ಕವನ ಎಂದರ್ಥ. ಅಂದರೆ, ಈ ಪ್ರಕಾರಕ್ಕೆ ್ರಚೀನ ಸಾಹಿತ್ಯದಲ್ಲಿ ಗೇಯಗುಣವೇ ಪ್ರಧಾನವಾಗಿತ್ತು. ರೆ ಈಗಿನ ಬಳಕೆಯಲ್ಲಿ, ಪ್ರಗಾಥವು ಅನೇಕ ವೇಳೆ ಬೋಧನೆಯ ರೂಪದಲ್ಲಿದ್ದು, ಸಾಮಾನ್ಯವಾಗಿ ವಸ್ತು, ವನೆ ಹಾಗೂ ಶೈಲಿಗಳಲ್ಲಿ ಉದಾತ್ತವಾದ, ಬಹುಮಟ್ಟಿಗೆ ್ರಸಬದ್ಧವಾದ ಭಾವಗೀತೆ; ಅದು ಭಾವದ ಬೆಳವಣಿಗೆಯು ುವಾಗಿ ಸಾಮಾನ್ಯ ಭಾವಗೀತೆಗಿಂತ ಉದ್ದವಾಗಿರುವುದು; ದೆ, ಕೆಲವು ವೇಳೆ ಅದರ ವಸ್ತುವು ಸಾರ್ವಜನಿಕವಾಗಿ ್ರಮುಖ್ಯತೆಯುಳ್ಳ ಒಂದು ಘಟನೆಯಾಗಿರಬಹುದು. ಪ್ರಾ॥ ಎಂ. ಶ್ರೀಕಂಠಯ್ಯನವರು ಹೇಳುವಂತೆ, "ಪ್ರಗಾಥವು ್ಯತೆಯುಳ್ಳ ದೀರ್ಘವಾದ ಒಂದು ಭಾವಗೀತೆ, ಬಹುಮಟ್ಟಿಗೆ ದು ಕಾವ್ಯೋಪನ್ಯಾಸ."

ಗ್ರೀಕ್ ಪ್ರಗಾಥದಲ್ಲಿ ಎರಡು ಭಾಗಗಳಿದ್ದುವು; ್ಬಿಯನ್' (Lesbian) ಎಂಬುದು ಕವಿಯ ಸ್ವಂತವಾಣಿ; ಾರಿಯನ್' (Dorian) ಎಂಬುದು ಅವನ ಸುಶಿಕ್ಷಿತ ವರ್ಗದ ಪಲ್ಲವಿ. ಇವುಗಳಲ್ಲಿ ಮೊದಲನೇ ಭಾಗವು ಬಹು ಟ್ಟಿಗೆ ಆಧುನಿಕ ಭಾವಗೀತೆಯಾಗಿ ಅಥವಾ ಸರಳಗೀತೆಯಾಗಿ

ಬೆಳೆದರೆ, ಪಲ್ಲವಿಯು ಈಗಿನ 'ಪ್ರಗಾಥ' ವಾಯಿತೆಂ
ಹೇಳಬಹುದು. ಕ್ರಮೇಣ ಗಾಯನದ ಮತ್ತು ನರ್ತನದ ಗು
ಕಡಿಮೆಯಾಗುತ್ತಾ ಬಂದು, ಪ್ರಗಾಥವು ಕೇವಲ ಓದುಗ
ವಾಯಿತು.

ಗ್ರೀಕ್ ಕಾವ್ಯದ **'ಲೆಸ್ಬಿಯನ್'** ಜಾತಿಗೆ ಈ ಹೆಸ
ಬಂದದ್ದು ಅದು ಉನ್ನತಿ ಹೊಂದಿದ 'ಲೆಸ್ಬೋಸ್' ಎಂ
ದ್ವೀಪದ ಹೆಸರಿನಿಂದ. ಈ ಜಾತಿಯಲ್ಲಿ ಚಿಕ್ಕಚಿಕ್ಕ ಪದ್ಯಗಳಿ
ಅದರ ರೂಪವು ಸರಳವಾಗಿರುವುದು, ಹೊರೇಸ್ ಮತ
ಕ್ಯಾಟಲಸ್ ಎಂಬ ಇಬ್ಬರು ರೋಮನ್ ಕವಿಗಳು
ರೂಪವನ್ನು ಲ್ಯಾಟಿನ್ ಭಾಷೆಯಲ್ಲಿ ಜನಪ್ರಿಯಗೊಳಿಸಿದ
ಇದಕ್ಕೆ 'ಹೊರೇಷಿಯನ್ ಪ್ರಗಾಥ' (Horatian Od
ಎಂದೂ ಹೆಸರು. ಆಂಗ್ಲ ಕಾವ್ಯದಲ್ಲಿ ಇದರ ಅನುಕರ
ಚೆನ್ನಾಗಿ ನಡೆಯಿತು. ಉದಾಹರಣೆ: ಮಾರ್ವೆಲ್ ರಚಿ
"ಕ್ರಾಮ್‌ವೆಲ್ಲನು ಐರ್ಲೆಂಡಿನಿಂದ ಹಿಂತಿರುಗಿದ್ದರ ಮೇ
(Upon Cromwell's Return From Irelan
ಎಂಬುದು.

'ಡೋರಿಯನ್' ಪ್ರಗಾಥ ಎಂಬ ಹೆಸರು ಅದು ಹುಟ್ಟಿ
ಜಿಲ್ಲೆ ಹಾಗೂ ಉಪಭಾಷೆಯಿಂದ ಬಂದಿದೆ. ಅದನ್ನು ಚೆನ್ನಾ
ಬಳಕೆಗೆ ತಂದ ಗ್ರೀಕ್ ಕವಿ ಪಿಂಡಾರ್ ಎಂಬುವನ ಹೆಸ
ಮೇಲೆ ಅದನ್ನು 'ಪಿಂಡಾರಿಕ್ ಒಡ್' ಎಂಬುದಾಗಿಯ
ಕರೆಯುವರು. ಈ ಜಾತಿಯ ಕವನವನ್ನು ನಟರ ಚಲನೆಗ
ಅನುಸಾರವಾಗಿ ಹಾಡುತ್ತಿದ್ದುದರಿಂದ ಅದರ ರಚನೆಯ
ನಾಟ್ಯದ ಮೂರುಭಾಗಗಳಿವೆ: 1. ಸ್ಟ್ರೋಫೆ (stropl

ಎಂಬ ಪದ್ಯ—ಇದನ್ನು ಹಾಡುವಾಗ ನಟರು ಬಲದಿಂದ ಎಡಕ್ಕೆ ತಿರುಗುತ್ತಿದ್ದರು. 2. 'ಆ್ಯಂಟಿಸ್ಟ್ರೋಫೆ' (Antistrophe) —ಇದನ್ನು ಹಾಡುವಾಗ ಎಡದಿಂದ ಬಲಕ್ಕೆ ತಿರುಗುತ್ತಿದ್ದರು. 3. 'ಎಪೋಡ್' (Epode) — ಮೊದಲನೇ ಎರಡಕ್ಕಿಂತ ಬೇರೆ ರೀತಿಯ ರಚನೆಯುಳ್ಳದ್ದು; ಇದನ್ನು ಹಾಡುವಾಗ ನಟರು ಚಲಿಸುತ್ತಿರಲಿಲ್ಲ. ಈ ಮೂರು ಭಾಗಗಳನ್ನು ಈ ಜಾತಿಯ ಪ್ರಗಾಥದಲ್ಲಿ ಎಷ್ಟು ಬಾರಿಯಾದರೂ ಪುನರಾವೃತ್ತಿಮಾಡ ಬಹುದು.

ಇಂಗ್ಲಿಷ್ ಸಾಹಿತ್ಯದಲ್ಲಿ ಮೊದಲು ಬಂದ ಪ್ರಗಾಥ ಗಳೆಂದರೆ ಸ್ಪೆನ್ಸರ್‌ಕವಿ ರಚಿಸಿದ ಮದುವೆಯ ಹಾಡುಗಳು, ಮಿಲ್ಟನ್‌ನ 'ಓಡ್ ಆನ್ ನೇಟಿವಿಟಿ'. ಅನಂತರ ಬಂದ ಕೌಲೆಯು ಪ್ರಗಾಥದಲ್ಲಿ ಗ್ರೀಕ್‌ಮಾರ್ಗವನ್ನು ಬಿಟ್ಟು, ತನ್ನದೇ ಆದ ರೀತಿಯಲ್ಲಿ ರಚಿಸಿದನು. ಈತನ ಸಂಪ್ರದಾಯವನ್ನು ಅನುಸರಿಸಿದವರು ವರ್ಡ್ಸ್‌ವರ್ತ್, ಕೋಲ್‌ರಿಜ್, ಟೆನಿಸನ್ ಮುಂತಾದವರು. ಕಾಂಗ್ರೀವ್ ಎಂಬುವನು ಕೌಲೆ ಮಾಡಿದ ತಪ್ಪನ್ನು ತಿದ್ದಲು ಯತ್ನಿಸಿದನು. ಗ್ರೇ ಮತ್ತು ಇತರ ಕೆಲವರು ಪಿಂಡಾರಿಕ್ ಕ್ರಮವನ್ನೇ ಹಿಡಿದರು. ಕೀಟ್ಸ್ ಮತ್ತು ಸ್ವಿನ್‌ಬರ್ನ್ ಎಂಬುವರು ಈ ಜಾಡನ್ನೇ ತುಳಿದರೂ, ಅದರಲ್ಲಿದ್ದ ಸ್ಟ್ರೋಫೆ ಕ್ರಮವನ್ನು ಅನುಸರಿಸಲಿಲ್ಲ. ಹೀಗೆ ಗ್ರೀಕ್ ಮೂಲದಿಂದ ಪ್ರಾರಂಭವಾದ ಪ್ರಗಾಥಮಾಧ್ಯಮ ವನ್ನು ಕವಿಗಳು ಕಾಲಕ್ರಮೇಣ ತಮ್ಮ ಭಾವಾಭಿವ್ಯಕ್ತಿಗೆ ವಿವಿಧ ರೀತಿಗಳಲ್ಲಿ ಬಳಸಿಕೊಂಡರು.

3. ಕೀಟ್ಸ್‌ನ ಪ್ರಗಾಥಗಳು

ಕೀಟ್ಸನು ತನ್ನ ಅಲ್ಪ ಜೀವಿದತ ಅವಧಿಯಲ್ಲಿ ವಿಧವಿಧ
ವಾದ ಅನೇಕ ಕಾವ್ಯಗಳನ್ನು ರಚಿಸಿದರೂ, ಅವನಿಗೆ ಕಾವ್ಯ
ಲೋಕದಲ್ಲಿ ಒಂದು ವಿಶಿಷ್ಟವಾದ ಸ್ಥಾನವನ್ನು ದೊರಕಿಸಿಕೊಟ್ಟಿ
ರುವುದು ಅವನ ಪ್ರಗಾಥಗಳೆಂದು ಹೇಳಬಹುದು. 1819ರಲ್ಲಿ
ಬಹುಮಟ್ಟಿಗೆ ಇವುಗಳ ರಚನೆಯಾಯಿತು. ಶಾಶ್ವತ–ತಾತ್ಕಾ
ಲಿಕ, ಸ್ಥಿರ–ಅಸ್ಥಿರ ಎಂಬ ವಸ್ತುವೇ ಅವನ ಎಲ್ಲಾ ಪ್ರಗಾಥ
ಗಳಲ್ಲೂ ಅಭಿವ್ಯಕ್ತವಾಗಿದೆಯೆನ್ನಬಹುದು. ಇವುಗಳ ಶಬ್ದ
ಸಮುಚ್ಚಯದ ಇಡೀ ಚಲನೆಯಲ್ಲಿ ಧ್ವನಿತವಾಗಿರುವುದು
ಸೌಂದರ್ಯ ಹಾಗೂ ಆನಂದಗಳ ವಿಚಾರವಾಗಿ ನಿಧಾನವಾಗಿ
ಮಾಡುವ ಶ್ರೀಮಂತ ಆಲೋಚನೆ; ಅಲ್ಲದೆ ಸೌಂದರ್ಯದ
ಅಭಾವದಲ್ಲಿ ಉಂಟಾಗುವ ನೋವೂ ಕೂಡ. ಕವಿಯ
ಮನಸ್ಸಿನಲ್ಲಿ ನಡೆದ ಆಳವಾದ ಭಾವನಾತ್ಮಕ ಹಾಗೂ ಬೌದ್ಧಿ
ಸಂಘರ್ಷದ ಫಲವಾಗಿ ಈ ಪ್ರಗಾಥಗಳು ಹೊರಹೊಮ್ಮಿ
ರುವುವು. ಆದರೆ ಸೌಂದರ್ಯದ ಆರಾಧನೆಯಂತಹ ಭಾವನಾತ್ಮ
ಕತೆಯೇ ಪ್ರಮುಖವಾಗಿ ಉಳ್ಳ ಈ ಕವನಗಳಲ್ಲಿ ಕೇವಲ
ತತ್ವವಿಚಾರಗಳನ್ನೇ ಹುಡುಕುವುದು ವ್ಯರ್ಥವೆನಿಸೀತು!

ಕೀಟ್ಸನು ರಚಿಸಿದ ಪ್ರಗಾಥಗಳು: (ಇವುಗಳಲ್ಲಿ ಸುಪ್ರ
ಸಿದ್ಧವಾದ ಏಳು ಪ್ರಗಾಥಗಳನ್ನು ಸ್ವಲ್ಪ ವಿಮರ್ಶೆಯೊಂದಿಗೆ
ಈ ಗ್ರಂಥದಲ್ಲಿ ಪರಿಚಯ ಮಾಡಿಕೊಡಲಾಗಿದೆ).

1. ಗ್ರೀಕ್ ಕರಂಡದ ಮೇಲಿನ ಪ್ರಗಾಥ
2. ಮನಸ್ಸಿನ ಅಧಿವೇವತೆಯನ್ನು ಕುರಿತು

3. ನೈಟಿಂಗೇಲ್ ಪಕ್ಷಿಯನ್ನು ಕುರಿತು
4. ಆಟಂ ಋತುವನ್ನು ಕುರಿತು
5. ಖಿನ್ನತೆಯ ಮೇಲೆ
6. ಅಲಸಿಕೆಯ ಮೇಲೆ
7. ಭಾವೋದ್ರೇಕದ ಹಾಗೂ ಆನಂದದ ಗಾಯಕರು
8. ಅಪೋಲೊವನ್ನು ಕುರಿತು
9. ಫ಼್ಯಾನಿಯನ್ನು ಕುರಿತು
10. ಚೂರು
11. ....ಗೆ
12. ಸಂತ ಮಾರ್ಕನ ಸಂಜೆ (ಅಪೂರ್ಣ)

4. ಗ್ರೀಕ್ ಕರಂಡದ ಮೇಲಿನ ಪ್ರಗಾಥ

ಕೀಟ್ಸನ ಕಲಾತ್ಮಕ ಲೇಖನಿಯಿಂದ ಸೃಷ್ಟಿಯಾದ ಈ ಪ್ರಗಾಥವು ಸಹೃದಯಲೋಕದಲ್ಲಿ ಅತ್ಯಂತ ಪ್ರಸಿದ್ಧವಾಗಿದೆ. ಹೆಸರೇನೋ ಗ್ರೀಕ್ ಕರಂಡವನ್ನು ಸೂಚಿಸಿದರೂ, ಇಲ್ಲಿ ಕವಿ ತನ್ನ ದೃಷ್ಟಿಗೆ ಬಿದ್ದಿರಬಹುದಾದ ಯಾವ ಒಂದು ವಿಶಿಷ್ಟ ಕರಂಡದಿಂದಲೂ ಸ್ಫೂರ್ತಿಗೊಂಡಿಲ್ಲವೆಂದು ತೋರುತ್ತದೆ. ಈತನ ಕಣ್ಣಿಗೆ ಹಬ್ಬವನ್ನುಂಟುಮಾಡಿರಬಹುದಾದ ಅನೇಕ ಕರಂಡಗಳ ಸೌಂದರ್ಯ ಹಾಗೂ ಗ್ರೀಕ್ ಕಲೆಯಲ್ಲಿ ಈತನಿಗಿದ್ದ ಅಭಿರುಚಿ ಇವುಗಳ ಸುಂದರ ಸಂಗಮ ಮನಸ್ಸಿನಲ್ಲಿ ಆಗಿರಬೇಕು. ಈ ಪ್ರಗಾಥದಲ್ಲಿ ಅಗೋಚರವಾದ ಕಲೆ ಮತ್ತು ಪ್ರಕೃತಿಗಿಂತ ಅದಕ್ಕೆ ಇರುವ ಹೆಚ್ಚುಗಾರಿಕೆ – ಇವುಗಳ ಮನೋಹರವಾದ ವರ್ಣನೆ ಬರುತ್ತದೆ.

ಈ ಪ್ರಗಾಥದಲ್ಲಿರುವ ಐದು ಪದ್ಯಗಳಲ್ಲಿ ಮೊದಲನೆಯದು ಕವಿ ಆನಂದಿಸಿದ ಗ್ರೀಕ್ ಕರಂಡದ ಸೌಂದರ್ಯದ ಪರಿಚಯವನ್ನು ಮಾಡಿಕೊಡುತ್ತದೆ. ಕರಂಡವು ನಿರ್ಮಾಣವಾಗಿ ಎಷ್ಟೋ ಕಾಲ ಸಂದಿದ್ದರೂ, ಅದು ತನ್ನ ಸೌಂದರ್ಯವನ್ನು ಸಂರಕ್ಷಿಸಿಕೊಂಡು ಬಂದಿದೆ. ಯಾರಿಗೂ ಅದರ ರಹಸ್ಯ ತಿಳಿಯದೇ ಇರುವುದರಿಂದ ಇದುವರೆಗೂ ಅದರ ಸೌಂದರ್ಯ ಹಾಗೂ ಗೂಢತೆ ಹಾಗೆಯೇ ಇವೆ. ಅದರ ಮೇಲೆ ಕೆತ್ತಿರುವ ವನದ ಮನೋಹರ ದೃಶ್ಯವು ಕಾವ್ಯದಲ್ಲಿ ವರ್ಣಿತವಾಗಬಹುದಾದ ಯಾವುದೇ ವಸ್ತುವಿಗಿಂತ ಹೆಚ್ಚು ಸುಂದರವಾಗಿದೆ.

ಅದರ ಮೇಲಿನ ಕೆತ್ತನೆಯು ಕವಿಯನ್ನು ಆಕರ್ಷಿಸುವುದಲ್ಲದೆ ವಿಸ್ಮಯಗೊಳಿಸುತ್ತದೆ. ಈ ವಿಸ್ಮಯದ ಪರಿಣಾಮವಾಗಿ ಕವಿಯ ಮನಸ್ಸಿನಲ್ಲಿ ಕೆಲವು ವಿಚಾರಗಳು ಉದ್ಭವವಾಗುತ್ತವೆ. ಇವೆಲ್ಲಾ ಯಾವುದರ ವಿಷಯವಾಗಿ ಕೆತ್ತಲ್ಪಟ್ಟಿವೆ ? ಈ ಚಿತ್ರದಲ್ಲಿ ಕಾಣುವ ಜನರೆಲ್ಲಾ ಯಾರು ? ಇವರು ಮಾನವರೋ, ದೇವತೆಗಳೋ ಅಥವಾ ಮಾನವ-ದೇವತೆಗಳೋ ? ಈ ಕಣಿವೆಯು ಟೆಂಪಿಯೋ ಅಥವಾ ಆರ್ಕೆಡಿಯೋ ? ನಲ್ಲರು ಬೆನ್ನಟ್ಟಿಕೊಂಡು ಬರುತ್ತಿರುವ ಈ ನಲ್ಲೆಯರು ಯಾರು ? ಇಲ್ಲಿ ಏಕೆ ಗಾಯಕರು ತಮ್ಮ ವಾದ್ಯಗಳೊಂದಿಗೆ ಇದ್ದಾರೆ ?

ಎರಡನೇ ಪದ್ಯದಲ್ಲಿ ನಾವು ಕಾಣುವುದು ನಮ್ಮ ಜೀವನದಲ್ಲಿನ ವಸ್ತುಗಳ ಅಲ್ಪಾಯುಷ್ಯಕ್ಕಿಂತ ಭಿನ್ನವಾಗಿ ಕಲೆಯಲ್ಲಿ ಅವುಗಳಿಗೆ ಕೊಟ್ಟಿರುವ ಶಾಶ್ವತ ಸ್ವರೂಪ. ಕರಂಡದ ಮೇಲೆ ಕೆತ್ತಿರುವ ಚಿತ್ರಗಳಲ್ಲಿ ಒಂದೇ ಒಂದು ಕೊರತೆಯೆಂದರೆ ಸತ್ಯತೆ. ಆದರೆ ಕಷ್ಟ, ಬದಲಾವಣೆ ಅಥವಾ ಸಾವಿಗೆ ಸಿಗದಂತಾಗುವ ಅಲೌಕಿಕ ಸುಖವು ಅವುಗಳಿಗೆ ಉಂಟು. "ಶ್ರುತಗಾನಂ ಮಧುರಂ ಅಶ್ರುತಗಾನಂ ಮಧುರತರಂ" (Heard melodies are sweet ; unheard melodies are sweeter) ಎಂಬ ಕೀಟ್ಸನ ಸುಪ್ರಸಿದ್ಧ ವಾಕ್ಯ ಇಲ್ಲಿ ಬರುತ್ತದೆ. ಚಿತ್ರದಲ್ಲಿನ ಯುವಕ ಗಾಯಕನು ಎಂದೆಂದಿಗೂ ಗಾಯನವನ್ನು ನಿಲ್ಲಿಸುವುದಿಲ್ಲ. ಹಾಗೆಯೇ ಅಲ್ಲಿನ ಮರಗಳ ಎಲೆಗಳೂ ಉದುರುವುದಿಲ್ಲ. ಚಿತ್ರದ ಪ್ರೇಮಿಯು ಎಂದೆಂದಿಗೂ ತನ್ನ ಪ್ರೇಯಸಿಯನ್ನು ಚುಂಬಿಸಲಾರನು ; ಆಕೆಗೆ ಚಿರಸೌಂದರ್ಯ ಹಾಗೂ ಪ್ರೇಮವಿರುವುದರಿಂದ ಅವನು ದುಃಖಪಡಬೇಕಾಗಿಲ್ಲ.

ಕರಂಡದ ಮೂರ್ತಿಗಳಿಗೆ ಎಲ್ಲಾ ರೀತಿಯ ಸುಖಾನುಭವ ವಿರುವುದನ್ನು ಕವಿ ಮೂರನೇ ಪದ್ಯದಲ್ಲಿ ವಿವೇಚಿಸಿದ್ದಾನೆ. ಇಲ್ಲಿ ಚಿತ್ರಿತವಾದ ಮರಗಳಿಗೆ ಯಾವಾಗಲೂ ವಸಂತಕಾಲ. ಮನೋಹರ ಗಾಯಕನು ಹೊಸಗೀತೆಗಳನ್ನು ಅನವರತವೂ ಹಾಡುವನು. ಧೀರಪ್ರೇಮಿಯ ಉತ್ಸಾಹ ಕುಂದುವುದೇ ಇಲ್ಲ; ಹಾಗೆಯೇ ಅವನ ಪ್ರೇಮಕ್ಕೆ ತೃಪ್ತಿಯೆನ್ನುವುದೂ ಇಲ್ಲ.

ನಾಲ್ಕನೇ ಪದ್ಯದಲ್ಲಿ, ಕವಿಯ ಗಮನ ಕರಂಡದ ಬೇರೊಂದು ಚಿತ್ರದ ಕಡೆಗೆ ಹೋಗುತ್ತದೆ. ಅರ್ಚಕನೊಬ್ಬನು ಒಂದು ಎಳೆಯ ಹಸುವನ್ನು ಬಲಿಕೊಡುವುದಕ್ಕಾಗಿ ಒಯ್ಯುತ್ತಿದ್ದಾನೆ. ಇದನ್ನು ನೋಡಲು ಒಂದು ಚಿಕ್ಕ ಊರಿನ ಜನರೆಲ್ಲಾ ತಮ್ಮ ತಮ್ಮ ಮನೆಗಳನ್ನು ಬಿಟ್ಟು ಬಂದಿದ್ದಾರೆ. ಅಲ್ಲಿಗೆ ಯಾರೂ ಹಿಂತಿರುಗಲಾರರಾದ್ದರಿಂದ ಆ ಊರು ಶಾಶ್ವತವಾಗಿ ನಿಶ್ಶಬ್ದವಾಗಿರುವುದೆಂದು ಕವಿಗೆ ಗೋಚರವಾಗುತ್ತದೆ.

ಐದನೇ ಪದ್ಯದಲ್ಲಿ, ಜನರು ಹಾಗೂ ಲಲನೆಯರು, ಮರಗಳು ಮತ್ತು ಶಾಖೆಗಳು – ಇವುಗಳಿಂದ ಕೂಡಿದ ಕರಂಡವನ್ನು ಸಂಬೋಧಿಸುತ್ತಾ, ಅದು ಅನಂತತೆಯ ಸಮಸ್ಯೆಯಷ್ಟೇ ರಹಸ್ಯಗರ್ಭಿತವಾಗಿರುವುದನ್ನೂ ಕವಿ ಕಾಣುತ್ತಾನೆ. ಜನತೆಗೆ ಅದರ ಸಂದೇಶವೂ ನಿರ್ದಿಷ್ಟವಾಗಿದೆ. ನಮ್ಮ ಕಷ್ಟಕಾರ್ಪಣ್ಯಗಳ ನಡುವೆಯೂ ಕೂಡ, "ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯ" (Beauty is truth, truth beauty) ಎಂದು ಕಿವಿ ಮಾತನಾಡುತ್ತಾ ಕರಂಡವು ಮಾನವನ ನಿಜವಾದ ಮಿತ್ರನಾಗಿ ಉಳಿಯುವುದು; ನಮಗೆ ಬರುವ ಈ ಆಲೋಚನೆಯೇ ಶಾಂತಿ ಹಾಗೂ ಸುಖವನ್ನು ಕೊಡುವುದು. ಅಲ್ಲದೆ ಭೂಮಿಯ ಮೇಲೆ

ಪ್ರತಿಯೊಬ್ಬನೂ ಇಷ್ಟು ತಿಳಿದರೆ ಸಾಕೆಂದು ಕರಂಡದ ಉಪದೇಶ.

ಕೀಟ್ಸನ ಈ ಸುಂದರ ಕವನದ ರಸವನ್ನು ಅನುಭವಿಸುವುದರ ಜೊತೆಯಲ್ಲೇ ಸಹೃದಯರಿಗೆ ಕೆಲವು ಹೆಚ್ಚಿನ ಸಂಗತಿಗಳೂ ಕಾಣುವುವು. ಜೀವನದ ಸೌಂದರ್ಯ ಹಾಗೂ ಚಟುವಟಿಕೆಗಳ ಸಾರ ಮೊದಲನೇ ಪದ್ಯದಲ್ಲಿ ಅಡಕವಾಗಿದೆ. ಈ ಕವಿಯ ಇನ್ನೊಂದು ಕವನದಲ್ಲಿ ನೈಟಿಂಗೇಲ್ ಪಕ್ಷಿಯು ಇಡೀ ಪಕ್ಷಿಜಾತಿಯ ಚಿಹ್ನೆಯಾದರೆ, ಇಲ್ಲಿ ಗ್ರೀಕ್ ಕರಂಡವು ಕಲೆಯ ದ್ಯೋತಕ; ಅಲ್ಲದೆ ಅದು ಕಲೆಯ ಅನಂತತೆ ಹಾಗೂ ಸೌಂದರ್ಯ-ಸತ್ಯದ ಸಮತೆಯನ್ನು ಬೋಧಿಸುವುದು. ಹಾಗೆಯೇ ನವ್ಯ ಗಾಯನ ಮಾಡುತ್ತಿರುವ ಗಾಯಕ, ಚಿರಯೌವನವುಳ್ಳ ವೃಕ್ಷಗಳು, ನಲ್ಲೆಯನ್ನು ಚುಂಬಿಸಲು ನಲ್ಲನ ಸತತ ಪ್ರಯತ್ನ ಹಾಗೂ ಆಕೆಯ ಚಿರಸೌಂದರ್ಯ – ಇಂತಹ ಮನೋಹರ ಚಿತ್ರಗಳ ಪರಂಪರೆಯನ್ನೇ ಇಲ್ಲಿ ನೋಡುತ್ತೇವೆ. ಹೀಗೆ ಕವನದಲ್ಲಿ ಬೇರೆ ಎಲ್ಲಾ ಇಂದ್ರಿಯಗಳಿಗಿಂತ ಕಣ್ಣಿಗೇ ಹಬ್ಬ. ಜೊತೆಗೆ, ಅಶ್ರುತಗಾನದ ಮಾಧುರ್ಯ, ಸತ್ಯ-ಸೌಂದರ್ಯಗಳ ಏಕತೆ— ಇವುಗಳನ್ನು ಸಾರುವ ಮರೆಯಲಾಗದ ವಾಕ್ಯಗಳು. ಇಷ್ಟಲ್ಲದೆ, ಗ್ರೀಕ್‌ಕಲೆಯ ವರ್ಣನೆ ಹಾಗೂ ಮಧ್ಯಯುಗದ ಭಾವನಾಪರವಶತೆಯಿಂದ ಕವನಕ್ಕೆ ಹೆಚ್ಚಿನ ಮೆರುಗು ಬಂದಿದೆ. "ಮಾನವ ಸೌಂದರ್ಯ ನಶಿಸಿಹೋಗುತ್ತದೆ, ಆದರೆ ಕಲೆಗಳದ್ದಲ್ಲ" (Cosa bella mortal passa e non d'arte) ಎಂಬ ಲಿಯೊನಾರ್ಡ್‌ಸನ ಮಾತು ಈ ಗ್ರೀಕ್‌ಕರಂಡದ ಧ್ಯೇಯಕ್ಕೆ ಸಂಪಾದಿಯಾಗಿ ಬರುವುದನ್ನು ಸೆಲಿನ್ ಕೋರ್ಟ್ ಅವರು ಗಮನಿಸಿರುವರು.

5. ಮನಸ್ಸಿನ ಅಧಿದೇವತೆಯನ್ನು ಕುರಿತ ಪ್ರಗಾಥ

ಗ್ರೀಕರ ಪುರಾಣದಲ್ಲಿ ಬರುವ ಸೈಕಿ (ಮನಸ್ಸಿನ ಅಧಿದೇವತೆ)ಯ ದಂತಕತೆಯು ರೊಮ್ಯಾಂಟಿಕ್ ಕವಿ ಕೀಟ್ಸ್‌ನನ್ನು ಆಕರ್ಷಿಸಿದ ಪರಿಣಾಮವಾಗಿ ಹೊರಹೊಮ್ಮಿದ ಕಾವ್ಯವಿದು. ಕ್ರಿ.ಶ. ಎರಡನೇ ಶತಮಾನದಲ್ಲಿ ರಚಿತವಾದ 'ಬಂಗಾರದ ಕತ್ತೆ' (The Golden Ass) ಎಂಬ ಗ್ರಂಥದಲ್ಲಿ ಈ ಕತೆ ಬರುತ್ತದೆ. ಇದನ್ನು ಇನ್ನೂ ಕೆಲವು ಕವಿಗಳು ತಮ್ಮ ಕಾವ್ಯವಸ್ತುವನ್ನಾಗಿ ಬಳಸಿಕೊಂಡಿದ್ದಾರೆ : ಶಾಕರ್ಲಿ ಮರ್ಮಿಯೊನ್ ಕವಿಯ ಒಂದು ಕವನ, ವಿಲಿಯಂ ಮಾರಿಸ್‌ನ "ಭೂಮಿಯ ಸ್ವರ್ಗ" (Earthly Paradise), ಪೇಟರನ "ಮಾರಿಯಸ್ ದಿ ಎಪಿಕ್ಯೂರಿಯನ್" ಮತ್ತು ಬ್ರಿಜಸ್‌ನ "ಇರೊಸ್ ಮತ್ತು ಸೈಕಿ."

ಮೇಲ್ಕಂಡ ಕತೆಯ ಪ್ರಕಾರ, ಪ್ರೇಮದೇವನಾದ ಕ್ಯೂಪಿಡನು ಮನಸ್ಸಿನ ಅಧಿದೇವತೆ ಸೈಕಿ ಎಂಬ ರಾಜಕುಮಾರಿಯನ್ನು ಮೋಹಿಸುವನು. ಆತನು ಪ್ರತಿ ರಾತ್ರಿಯೂ ಆಕೆಯ ಬಳಿ ಬಂದು ಹೋಗುತ್ತಿದ್ದರೂ, ಅದೃಶ್ಯನಾಗಿದ್ದು ತನ್ನನ್ನು ಕಣ್ಣಿನಿಂದ ನೋಡುವ ಪ್ರಯತ್ನವನ್ನೂ ಮಾಡಕೂಡದೆಂದು ಆಕೆಗೆ ತಿಳಿಸುವನು. ಆಕೆಯ ಪ್ರೇಮಿಯು ಒಂದು ಹಾವೆಂದೂ, ಕೊನೆಗೆ ಅದು ಆಕೆಯನ್ನು ನುಂಗುವುದಾಗಿಯೂ ಆಕೆಯ ಸಹೋದರಿಯರು ಆಕೆಗೆ ತಿಳಿಸುವರು. ಒಂದು ರಾತ್ರಿ ಕ್ಯೂಪಿಡನು ನಿದ್ರಿಸುತ್ತಿದ್ದಾಗ ಆಕೆ ಕುತೂಹಲದಿಂದ ದೀಪ

ವನ್ನು ಹಿಡಿದು ಅವನನ್ನು ನೋಡುವಳು. ಅವನ ಸೌಂದರ್ಯ ವನ್ನು ಆಸ್ವಾದಿಸುತ್ತಾ ಆಕೆಯು ಮನಸ್ಸು ಕ್ಷೋಭೆಗೊಳ್ಳು ವುದು; ಆಗ ಒಂದು ತೊಟ್ಟು ಬಿಸಿ ಎಣ್ಣೆಯನ್ನು ಆತನ ಭುಜದ ಮೇಲೆ ಹಾಕುವಳು. ಇದರಿಂದ ಕೋಪಗೊಂಡ ಪ್ರೇಮದೇವ ವಿರಹದಿಂದ ಸದಾ ನರಳುತ್ತಿರುವಂತೆ ಶಪಿಸಿ ಆಕೆಯುನ್ನು ಬಿಟ್ಟು ಹೋಗುವನು. ಇದಾದಮೇಲೆ ಸೈಕಿಯು ತನ್ನ ನಲ್ಲನನ್ನು ಅರಸುತ್ತಾ ಪ್ರಪಂಚದಲ್ಲೆಲ್ಲಾ ಅಲೆದಾಡು ವಳು ; ಜೊತೆಯಲ್ಲಿ ಅವಳ ರೂಪದ ಬಗ್ಗೆ ತುಂಬಾ ಅಸೂಯೆ ಪಡುತ್ತಿರುವ ಕ್ಯೂಪಿಡನ ತಾಯಿ ವೀನಸಳ ಕಿರುಕುಳ ಬೇರೆ. ಕೊನೆಗೆ ಜ್ಯೂಪಿಟರ್ ದೇವನಿಗೆ ಆಕೆಯ ವಿಚಾರದಲ್ಲಿ ಕರುಣೆ ಬಂದು; ಆಕೆಯುನ್ನು ದೇವತೆಯನ್ನಾಗಿ ಮಾಡಿ ಕ್ಯೂಪಿಡನ ಜೊತೆಯಲ್ಲಿ ಸೇರಿಸುವನು.

ಕ್ಯೂಪಿಡ್ ಮತ್ತು ಸೈಕಿಯುರ ಕತೆಗೆ ಸಂವಾದಿಯಾಗಿ ಬರುವ ಭಾರತೀಯ ಕತೆಯೊಂದನ್ನು ಡಾ॥ ಕೆ. ಆರ್. ಶ್ರೀನಿವಾಸ ಅಯ್ಯಂಗಾರರು ಗುರುತಿಸಿದ್ದಾರೆ. ದೇವಲೋಕದ ಅಪ್ಸರೆಯರಲ್ಲಿ ಒಬ್ಬಳಾದ ಊರ್ವಶಿಯು ಭೂಲೋಕದ ರಾಜನಾದ ಪುರೂರವನನ್ನು ಪ್ರೇಮಿಸುವಳು ; ಆದರೆ ಅವನು ತನ್ನ ನಗ್ನ ಶರೀರವನ್ನು ತೋರಿಸಲೇಕೂಡದೆಂಬ ನಿಬಂಧನೆ ಯುನ್ನು ವಿಧಿಸುವಳು. ಅವನ ಸ್ಪರ್ಧಿಗಳಾದ ಗಂಧರ್ವರು ಅವನನ್ನು ಆಕೆಯಿಂದ ಅಗಲಿಸಲು ಒಂದು ಭಾರಿ ಮಿಂಚನ್ನುಂಟು ಮಾಡುವರು. ಆ ಬೆಳಕಿನಲ್ಲಿ ಅವನ ಶರೀರ ಆಕೆಗೆ ಕಂಡು ಬಂದು ಕೂಡಲೇ ಅದೃಶ್ಯಳಾಗುವಳು. ಅನಂತರ ಪುರೂರ ವನು ವಿರಹತಾಪವನ್ನು ತಡೆಯಲಾರದೆ ಹುಚ್ಚನಂತಾಗಿ ಕಾಡಿನಲ್ಲೆಲ್ಲಾ ಅಲೆದಾಡುವನು. ಕೊನೆಗೆ ಅವನೂ ಒಬ್ಬ

ದೇವನಾಗುವ ವರ ಲಭಿಸಿದ್ದರಿಂದ ಸ್ವರ್ಗದಲ್ಲಿ ಊರ್ವಶಿಯೊಡನೆ ಸೇರುವನು.

"ಓಡ್ ಟು ಸೈಕಿ" (ಮನಸ್ಸಿನ ಅಧಿದೇವತೆಯನ್ನು ಕುರಿತ ಪ್ರಗಾಥ) ಎಂಬ ಕಾವ್ಯದಲ್ಲಿ ಕೀಟ್ಸ್ ಕವಿಯು ಪ್ರಗಾಥ (Ode)ದ ಸಂಪ್ರದಾಯದಂತೆ ಸೈಕಿಯನ್ನು ಸಂಬೋಧಿಸುತ್ತಾ ಆಕೆಯನ್ನು ವರ್ಣಿಸುವನು. ಒಟ್ಟು ೬೭ ಸಾಲುಗಳುಳ್ಳ ಈ ಕವನದಲ್ಲಿ ನಾಲ್ಕು ಪದ್ಯಗಳಿವೆ. ಮೊದಲು 'ಓ, ದೇವತೆಯೇ !' ಎಂದು ಸೈಕಿಯನ್ನು ಕರೆಯುತ್ತಾ, ಸಿಹಿ ನೆನಪಿನಿಂದ ಬಂದ ಈ ಕೆಲವು ರಾಗವಿಲ್ಲದ ಸಾಲುಗಳನ್ನು ಆಲಿಸೆಂದು ಕವಿ ಕೇಳಿಕೊಳ್ಳುವನು. ಆಕೆಯ ರಹಸ್ಯಗಳನ್ನು ಆಕೆಯ ಕಿವಿಗೇ ಕೇಳುವಂತೆ ಹಾಡಬೇಕಾಗಿರುವುದಕ್ಕೆ ಕ್ಷಮೆ ಕೇಳುವನು. ಆತನಿಗೆ ಸ್ವಪ್ನ ಬಿದ್ದಿರಬೇಕು ; ಇಲ್ಲವೇ, ಎಚ್ಚರವಾದ ಕೂಡಲೆ ಸೈಕಿಯನ್ನು ನೋಡಿರಬೇಕು. ಆವನು ಯಾವ ವಿಚಾರವೂ ಇಲ್ಲದೆ ಸುಮ್ಮನೆ ಕಾಡಿನಲ್ಲಿ ಅಲೆಯುತ್ತಿದ್ದನಂತೆ. ಆಗ, ಒಂದು ತೊರೆಯ ಬಳಿಯಲ್ಲಿ, ಪಿಸುಗುಟ್ಟುತ್ತಿರುವ ಎಲೆಗಳ ಮೇಲುಛಾವಣಿಯ ಮತ್ತು ಕಂಪಿಸುತ್ತಿರುವ ಪುಷ್ಪಗಳ ಕೆಳಗೆ, ಹುಲ್ಲಿನ ಮೇಲೆ ಜೊತೆ ಜೊತೆಯಾಗಿ ಮಲಗಿದ್ದ ಎರಡು ಸುಂದರ ಸೃಷ್ಟಿಗಳನ್ನು ಆಶ್ಚರ್ಯದಿಂದ ನೋಡಿದನಂತೆ. (ಈ ವರ್ಣನೆಯಲ್ಲಿ, ಪಂಚೇಂದ್ರಿಯಗಳ ಅನುಭವಗಳನ್ನು ಒಟ್ಟುಗೂಡಿಸಲಾಗಿದೆ). ಕವಿಯ ಪ್ರಕಾರ ಅವರಿಬ್ಬರೂ ಕೆಂಪು ಹೂಗಳಿಂದ ಕಂಗೊಳಿಸುತ್ತಾ, ಶಾಂತವಾಗಿ ಉಸಿರಾಡುತ್ತಾ ಪರಸ್ಪರ ಆಲಿಂಗಿಸಿಕೊಂಡು ಹುಲ್ಲಿನ ಹಾಸಿಗೆಯ ಮೇಲೆ ಪರಿಮಳ ಪುಷ್ಪಗಳ ನಡುವೆ ಮಲಗಿದ್ದರು. ನಿದ್ರಾವಶರಾಗಿದ್ದ ಅವರ ತುಟಿಗಳು ಒಂದನ್ನೊಂದು ತಗಲಿರಲಿಲ್ಲ; ಆದರೆ ಮುಂದೆ ಎಚ್ಚೆತ್ತಾಗ

ಅವು ಹಿಂದಿನ ಚುಂಬನಗಳ ಸಂಖ್ಯೆಯನ್ನು ಮೀರಿಸಲು ಸಿದ್ಧವಾಗಿದ್ದವು; ಆಗ ಅವರ ಪರಸ್ಪರ ಪ್ರೇಮದ ಅರಿವು ಪುನಃ ಆಗುತ್ತಿತ್ತು. (ಇದೇ ಕವಿಯೇ ಬರೆದ ಗ್ರೀಕ್ ಕರಂಡವನ್ನು ಕುರಿತ ಮತ್ತು ಚಿಂತಾಕುಲತೆಯನ್ನು ಕುರಿತ ಪ್ರಗಾಥಗಳಲ್ಲಿ ಬರುವ ಸಮಾನ ವರ್ಣನೆಯನ್ನು ಸಹೃದಯರು ಇಲ್ಲಿ ಗಮನಿಸಬಹುದು). ಅಲ್ಲಿ ಮಲಗಿದ್ದ ಇಬ್ಬರಲ್ಲಿ ಪ್ರೇಮದೇವ ಕ್ಯೂಪಿಡನನ್ನು ಕವಿ ಗುರುತಿಸಿದನಂತೆ. ಆದರೆ ಅವನ ಜೊತೆಯಲ್ಲಿದ್ದವಳು ಯಾರು ಎಂದು ಕುತೂಹಲದಿಂದ ಪ್ರಶ್ನಿಸುವನು.

ಅನಂತರ ಕವಿ ಸಂಬೋಧಿಸುವ ಪ್ರಕಾರ, ಒಲಿಂಪಸ್ ಶಿಖರದ ಮೇಲಿರುವ ದೇವತೆಗಳೆಲ್ಲಾ ಮಾನವರ ಸ್ಮೃತಿ ಪಥದಿಂದ ಅಳಿಸಿ ಹೋಗುತ್ತಿದ್ದರೂ, ಸೈಕಿಯ ಆವಿರ್ಭಾವವಾದದ್ದು ಈಚೆಗೆ; ಹೀಗೆ ಆಕೆಯ ಸುಂದರ ದರ್ಶನ ಅಚ್ಚಳಿಯದಂತಿದೆ. ಆಕೆ ನೀಲಗಗನದಲ್ಲಿ ಪ್ರಕಾಶಿಸುತ್ತಿರುವ ಚಂದ್ರದೇವತೆಗಿಂತ, ಆಕಾಶದ ಮಿಂಚು ಹುಳುವಂತಿರುವ ಶುಕ್ರನಿಗಿಂತ ಸುಂದರಳು. ಆಕೆಗಾಗಿ ದೇವಾಲಯವಿಲ್ಲ; ಪುಷ್ಪರಾಶಿಯುಳ್ಳ ಪೀಠವಿಲ್ಲ; ಆಕೆಗೆ ಚಂದ್ರದೇವತೆಗಿರುವಂತೆ ಸೇವಕಿಯರಿಲ್ಲ; ಧ್ವನಿ, ಗೀತವಾದ್ಯಾದಿಗಳು, ಸುಗಂಧದ ಧೂಪ ಯಾವುದೂ ಇಲ್ಲ; ಆಕೆಗಾಗಿ ಗರ್ಭಗುಡಿಯಿಲ್ಲ, ಮರಗಳ ತೋಪು ಇಲ್ಲ (ಈ ಮಾತುಗಳನ್ನು ಬಳಸುವಾಗ ಪ್ರಾಯಶಃ ಕವಿ, ರೋಂ ಪಟ್ಟಣಕ್ಕೆ 16 ಮೈಲಿ ದೂರದಲ್ಲಿ ಮರದ ತೋಪಿನಲ್ಲಿರುವ ಡಯಾನಾ ದೇವತೆಯ ಗುಡಿಯನ್ನು ಕುರಿತು ಯೋಚಿಸಿರಬಹುದು). ಭವಿಷ್ಯ ಹೇಳುವ ಸ್ಥಳವಾಗಲಿ, ಬಾಯಲ್ಲಿ ನೊರೆ ಬರಿಸುತ್ತಾ ಕನಸು ಕಾಣುತ್ತಾ ಹೇಳುವುದಾಗಲಿ ಇಲ್ಲ. (ಇಲ್ಲಿ ಮಿಲ್ಟನ್ ಕವಿಯ "ನೇಟಿವಿಟಿ ಓಡ್" ಎಂಬುದರ ಪ್ರತಿ

ಧ್ವನಿಯಿದೆ. ಕೀಟ್ಸನಿಗೆ ಪ್ರಾಯಶಃ ಡೆಲ್ಫಿಯಲ್ಲಿನ ಭವಿಷ್ಯ
ವಾಚಕಿಯ ನೆನಪು ಬಂದಿರಬಹುದು).

ಕವಿಯ ಕಣ್ಣಿಗೆ ಸೈಕಿ ಅತ್ಯಂತ ಪ್ರಕಾಶಮಾನಳಾದವಳು. ಕಾಡಿನ ಮರಗಳ ಕೊಂಬೆಗಳು, ಗಾಳಿ, ನೀರು ಮತ್ತು ಬೆಂಕಿ ಪವಿತ್ರವಾಗಿದ್ದಾಗ, ಪ್ರತಿಜ್ಞೆಗಳಿಗೆ ಹಾಗೂ ವಾದ್ಯ ವಾದನಕ್ಕೆ ತಡವಾದರೇನಂತೆ; ಈ ದಿನಗಳಲ್ಲೂ ಆಕೆಯ ರೆಕ್ಕೆಗಳು ಸ್ಫೂರ್ತಿ ಗೊಂಡು ಹಾಡುವುವು. ಮಧ್ಯರಾತ್ರಿಯಲ್ಲಿ ನಡೆಯುವ ಈ ಗಾನದಲ್ಲಿ ಹಿಮ್ಮೇಳವಾಗಲು ಕವಿ ಇಚ್ಛಿಸುವನು. ಹಿಂದಿನ ಪದ್ಯದಲ್ಲಿ ಸೈಕಿಯ ಮಟ್ಟಿಗೆ ಇಲ್ಲ ಇಲ್ಲ ಎಂದು ಹೇಳಲಾದ ಧ್ವನಿ, ವಾದ್ಯಗಳು, ಗುಡಿ, ಭವಿಷ್ಯವಾಚನದ ಸ್ಥಳ ಮುಂತಾದು ವುಗಳೆಲ್ಲಾ ಆಗ ಉಂಟಾಗುವುವೆಂದು ಕವಿಯ ನಂಬಿಕೆ.

ಕವಿ ತಾನು ಸೈಕಿಯ ಅರ್ಚಕನಾಗಿಯೇ ಆಗುವೆನೆಂಬು ದನ್ನು ಸ್ಥಿರೀಕರಿಸುವನು. ಅವನು ಆಕೆಗಾಗಿ ಗುಡಿಯನ್ನು ಕಟ್ಟುವುದು ತನ್ನ ಮನಸ್ಸಿನಲ್ಲಿ ಇದುವರೆಗೂ ಬಳಸದಿರುವ ಜಾಗದಲ್ಲಿ; ಹೊಸದಾಗಿ ಶಾಖೆಗಳಾಗಿ ಹುಟ್ಟಿರುವ ಆಲೋ ಚನೆಗಳು ತಾವೇ ಗಾಳಿಯಲ್ಲಿ ದೇವದಾರು ವೃಕ್ಷಗಳ ಬದಲು ಗೊಣಗುಟ್ಟುವ ಶಬ್ದ ಮಾಡುತ್ತವೆ. ದೂರದಲ್ಲಿ ಸುತ್ತಲೂ ದಟ್ಟವಾಗಿ ಗುಂಪುಗುಂಪಾಗಿರುವ ಮರಗಳು ಪರ್ವತಗಳನ್ನು ಗರಿಗಳಿಂದ ಮುಚ್ಚುವಂತೆ ಮುಚ್ಚಿವೆ. ಅಲ್ಲಿ ಮಂದಾನಿಲಗಳ ತೊರೆಗಳ, ಪಕ್ಷಿಗಳ ಹಾಗೂ ದುಂಬಿಗಳ ಪ್ರಭಾವದಿಂದ ವೃಕ್ಷದ ಅಪ್ಸರೆಯರು ಹಾಯಾಗಿ ನಿದ್ರೆ ಹೋಗುವರು. ಇಂತಹ ಪ್ರಶಾಂತ ವಾತಾವರಣದಲ್ಲಿ, ಮಧ್ಯೆ ಮಧ್ಯೆ ತಲೆ ಹಾಕುವ ಆಲೋಚನೆಗಳಿಂದ ತಪ್ಪಿಸಿಕೊಳ್ಳಲು ಒಂದು ಆಶ್ರಯವನ್ನು

ಕವಿ ಅಪೇಕ್ಷಿಸುವನು; ಅಂತಹ ಒಂದು ಪವಿತ್ರ ಏಕಾಂತ ಸ್ಥಳವನ್ನು ವಿವಿಧ ಹೂಗಳು, ನಕ್ಷತ್ರ ಮುಂತಾದುವುಗಳಿಂದ ಅಲಂಕರಿಸುವನು. ಕವಿಯ ಪ್ರಕಾರ, ಅಲ್ಲಿ ಸೈಕಿಗೆ ಆನಂದದ ಅನುಭವವಲ್ಲದೆ, ಪ್ರೇಮದೇವನನ್ನು ಒಳಗೆ ಬಿಡಲು ಪ್ರಕಾಶ ಮಾನವಾದ ದೀಪ ಮತ್ತು ರಾತ್ರಿ ತೆರೆಯುವ ಕಿಟಕಿ ಇರುವುವು.

ಹೀಗೆ ಕಾವ್ಯಕ್ಕೆ ಕತೆಯನ್ನು ಗ್ರೀಕರ ಪುರಾಣದಿಂದ ತೆಗೆದುಕೊಂಡರೂ, ಕೀಟ್ಸನು ಅದನ್ನು ಕೇವಲ ಆಧಾರವನ್ನಾಗಿ ಇಟ್ಟುಕೊಂಡು, ಆದರ ಸನ್ನಿವೇಶವನ್ನೂ ಮತ್ತು ಮನಸ್ಸಿನ ಅಧಿದೇವತೆ (ಸೈಕಿ)ಯನ್ನೂ ತನ್ನದೇ ಆದ ರೀತಿಯಲ್ಲಿ ವರ್ಣಿ ಸಿರುವನು. ಅಲ್ಲದೆ, ಇದನ್ನು ರಚಿಸುವಾಗ ಅಲ್ಲಲ್ಲಿ ಬರುವ, ಈ ಕವಿಯ ಮತ್ತು ಇತರರ ಕಾವ್ಯಪಂಕ್ತಿಗಳ ಪ್ರತಿಧ್ವನಿ ಹಾಗೂ ಪ್ರಗಾಥ (Ode) ದ ಮಾಧ್ಯಮವನ್ನು ಬಳಸಿರುವ ರೀತಿ ಹೃದಯಂಗಮವಾಗಿವೆ. ಶಬ್ದ ಪ್ರಯೋಗದ ಪರಿಣಾಮವನ್ನು ಹೆಚ್ಚಿಸಲು ಕವಿಯು ಸಂಯುಕ್ತ-ಗುಣವಾಚಕಗಳನ್ನೂ ಬಳಸಿ ದ್ದಾನೆ. ಉದಾ: Soft-conched, cool-rooted, fragrant-eyed.

ಈ ಪ್ರಗಾಥದ ವಿಚಾರವಾಗಿ ಕೀಟ್ಸನು ತನ್ನ ಸಹೋದರ ಮತ್ತು ಸಹೋದರಿಗೆ 1819 ನೇ ಫೆಬ್ರುವರಿಯಲ್ಲಿ ಬರೆದ ಪತ್ರ ಹೀಗಿದೆ—''ಕೊನೆಯದಾಗಿ ನಾನು ಬರೆದ ಈ ಕವನವು ಸ್ವಲ್ಪ ಶ್ರಮದಿಂದ ಬರೆದ ಪ್ರಪ್ರಥಮ ಹಾಗೂ ಏಕೈಕ ಕವನ ; ಅನೇಕ ಸ್ಥಳಗಳಲ್ಲಿ ನಾನು ಕವನಗಳನ್ನು ಆತುರದಿಂದ ಗೀಚಿದ್ದೇನೆ ; ಇದನ್ನು ಮಾತ್ರ ನಿಧಾನವಾಗಿ ರಚಿಸಿದ್ದೇನೆ ; ಇದು ಶ್ರೀಮಂತ

ವಾಗಿದೆಯೆಂದು ನನ್ನ ಭಾವನೆ ; ಇನ್ನೂ ಶಾಂತವಾಗಿ, ಹಿತಕರವಾಗಿ ಇತರ ವಿಷಯುಗಳನ್ನು ಬರೆಯುಲು ಇದು ನನ್ನನ್ನು ಪ್ರೋತ್ಸಾಹಿಸುತ್ತದೆಯೆಂದು ನಂಬಿರುತ್ತೇನೆ. ಅಗಸ್ಟನ್ ಕಾಲದ ತರುವಾಯ ಬಾಳಿದ ಪ್ಲೇಟೊಪಂಥದ ಅಪ್ಯುಲಿಯಸ್ ದೇವತೆಗಿಂತಲೂ ಪೂರ್ವದಲ್ಲಿ ಸೈಕಿ (Psyche) ಯು ಓರ್ವ ದೇವತೆಯೆಂದು ಪರಿಗಣಿಸಲ್ಪಟ್ಟಿರಲಿಲ್ಲ ಎಂಬುದು ನಿಮಗೆ ನೆನಪಿರಬೇಕು. ಆದರಿಂದಾಗಿ ಹಳೆಯ ಕಾಲದ ಹುರುಪಿನಿಂದ ಆ ದೇವತೆಯನ್ನು ಯಾವಾಗಲೂ ಪೂಜಿಸುತ್ತಲೂ ಇರಲಿಲ್ಲ, ಆಕೆಗೆ ಬಲಿಕೊಡುತ್ತಲೂ ಇರಲಿಲ್ಲ ; ಮತ್ತು ಪ್ರಾಚೀನ ಧರ್ಮದಲ್ಲಿ ಬಹುಶಃ ಆಕೆಯನ್ನು ಕುರಿತು ಆಲೋಚಿಸುತ್ತಲೂ ಇರಲಿಲ್ಲವೆಂಬುದೂ ನಿಮಗೆ ಜ್ಞಾಪಕವಿರಬಹುದು. ನಾನು ಕಟ್ಟಾ ಸಂಪ್ರದಾಯವಾದಿಯಾದ್ದರಿಂದ ಅಂತಹ ದೇವತೆಗೆ ಅನಾದರ ತೋರಿಸಲಾರೆ.” ಅಂತೂ ಕವಿಯು ಈ ಪ್ರಗಾಥದಲ್ಲಿ ಪುರಾಣಕ್ಕೆ ತನ್ನದೇ ಆದ ಒಂದು ಮೆರುಗನ್ನು ಕೊಟ್ಟಿದ್ದಾನೆಂಬುದು ಸುಸ್ಪಷ್ಟವಾಗಿದೆ. ಈ ಕಾವ್ಯವನ್ನು ಕುರಿತು ಬರೆದ ಈ ಪತ್ರದಿಂದ ನಮಗೆ ಕವಿಯ ಸ್ವಭಾವ ತಿಳಿಯುತ್ತದೆ.

6. ನೈಟಿಂಗೇಲ್ ಪಕ್ಷಿಯು ಮೇಲಿನ ಪ್ರಗಾಥ

ಕೀಟ್ಸ್‌ನ ಉತ್ತಮ ಪ್ರಗಾಥ (Odes) ಗಳಲ್ಲಿ ಇದೂ ಒಂದು. ಕೇವಲ ಇಪ್ಪತ್ತಾರು ವರ್ಷ ಬಾಳಿದ ಈ ಕವಿ 1819ರ ವಸಂತಮಾಸದಲ್ಲಿ ಇಂಗ್ಲೆಂಡಿನ ಹ್ಯಾಂಪ್‌ಸ್ಟೀಡ್ ಎಂಬಲ್ಲಿ ವಾಸ ವಾಗಿದ್ದಾಗ ರಚಿಸಿದ ಗೀತೆಯಿದು. ಕವಿಗೆ ಸ್ಫೂರ್ತಿಯಿತ್ತದ್ದು ಅಲ್ಲಿ ಆತನ ಮನೆಯ ಕೈತೋಟದಲ್ಲಿ ಕೇಳಿದ ನೈಟಿಂಗೇಲ್ ಪಕ್ಷಿಯ ಗಾನ. ಆ ವಸಂತ ಮಾಸದಲ್ಲಿ ಒಂದು ನೈಟಿಂಗೇಲ್ ಪಕ್ಷಿಯು ಅಲ್ಲಿ ಬೆವನ್‌ರ ಮನೆಯ ಪಕ್ಕದಲ್ಲಿ ತನ್ನ ಗೂಡು ಕಟ್ಟಿಕೊಂಡಿತು. ಕವಿಗೆ ಅದರ ಗಾನದಿಂದ ತುಂಬಾ ಆನಂದ ವುಂಟಾಯಿತು. ಒಂದು ಬೆಳಿಗ್ಗೆ ತನ್ನ ಕುರ್ಚಿಯನ್ನು ಪ್ಲಂ ಹಣ್ಣಿನ ಮರದ ಅಡಿಯಲ್ಲಿದ್ದ ಒಂದು ಹುಲ್ಲಿನ ಪ್ರದೇಶಕ್ಕೆ ಒಯ್ದನು. ಅಲ್ಲಿ ಸುಮಾರು 2-3 ಘಂಟೆಗಳ ಕಾಲ ಇದ್ದನು. ಅನಂತರ ಕೈಯಲ್ಲಿ ಕೆಲವು ಕಾಗದದ ಚೂರುಗಳನ್ನು ಹಿಡಿದು ಕೊಂಡು ಮನೆಯನ್ನು ಸೇರಿದನು. ಆ ಕೂಡಲೆ ತನ್ನ ಅನು ಭವವನ್ನು ಈ ಪ್ರಗಾಥದ ರೂಪಕ್ಕೆ ಇಳಿಸಿದನಂತೆ.

ಇದಕ್ಕೆ ಹಿನ್ನೆಲೆಯಾಗಿ, ವಾಸ್ತವಿಕ ಹಾಗೂ ಆದರ್ಶ ಜೀವನದ ಪರಸ್ಪರ ತಿಕ್ಕಾಟ, ಅಣ್ಣನನ್ನು ಕಳೆದುಕೊಂಡ ದುಃಖ, ತನ್ನ ಕವಿ-ಜೀವನದಲ್ಲಿ ಇಮ್ಮಡಿಸಿದ ಕಷ್ಟ ಕಾರ್ಪಣ್ಯ ಗಳೇ ಮೊದಲಾದ ಅಂಶಗಳು ಒಟ್ಟಿಗೆ ಸೇರಿ ಕವಿಗೆ ಜೀವನದಲ್ಲಿ ನಿರಾಶೆಯನ್ನು ಉಂಟುಮಾಡಿದುವು. ಇವೆಲ್ಲವನ್ನೂ ಮರೆ

ಯಲು ಕೀಟ್ಸ್‌ನು ಕಲ್ಪನಾ ಪ್ರಪಂಚದಲ್ಲಿ ಎತ್ತರಕ್ಕೆ ಹೋಗಲು ಮಾಡಿದ ಪ್ರಯತ್ನವೇ ಈ ಕಾವ್ಯ. ಇದರಲ್ಲಿ ಒಟ್ಟು ಪ್ರತಿಯೊಂದೂ ಹತ್ತು ಸಾಲುಗಳುಳ್ಳ ಎಂಟು ಪದ್ಯಗಳಿವೆ. ಪ್ರಗಾಥ ರೂಪದ ಪದ್ಧತಿಯಂತೆ, ಕವಿ ನೈಟಿಂಗೇಲ್ ಪಕ್ಷಿಯನ್ನು ಕುರಿತು ಸಂಬೋಧಿಸುವನು. ಗ್ರೀಕರ ಪುರಾಣದಂತೆ ನೈಟಿಂಗೇಲ್ ಪಕ್ಷಿಯು ದುಃಖಸೂಚಕವಾದ್ದರಿಂದ ಕವಿ ಇಲ್ಲಿ ಅದನ್ನು ಉಚಿತವಾಗಿ ಬಳಸಿಕೊಂಡಿದ್ದಾನೆ.

ಕೀಟ್ಸ್‌ನು ನೈಟಿಂಗೇಲ್ ಪಕ್ಷಿಯನ್ನು ಕುರಿತು ಹೇಳುವ ಮಾತು : "ನಿನ್ನ ಸಂಗೀತವನ್ನು ಕೇಳಿ ನನಗೆ ಎಷ್ಟು ಆನಂದವಾಯಿತೆಂದರೆ ಆ ಅನುಭವ ಈಗ ತಾನೇ ಸೇವಿಸಿದ ನಿದ್ರಾಕಾರಕ ಔಷಧಿಯಿಂದ ಬರುವಂತಹುದು. ಗ್ರೀಕರ ಪುರಾಣದ ಪ್ರಕಾರ, ಪಾತಾಳಲೋಕದ ಲೀತ್ ನದಿಯಲ್ಲಿ ಮುಳುಗಿ ಇಹಲೋಕದ ಪ್ರಜ್ಞೆಯನ್ನೇ ಮರೆತುಬಿಡುವ ಸನ್ನಿವೇಶವಿದು. ನಿನ್ನ ಸಂತೋಷವನ್ನು ನೋಡಿ ನನಗೆ ಅಸೂಯೆಯುಂಟಾಗಿ ಹೀಗೆ ಮಾಡುವುದಿಲ್ಲ. ಆದರೆ ಅಸಂಖ್ಯಾತ ಛಾಯೆಗಳುಳ್ಳ ಮರಗಳ ತೋಪಿನಲ್ಲಿ ಬೇಸಿಗೆಯನ್ನು ಕುರಿತು ಸುಖವಾಗಿ ಹಾಡುತ್ತಿರುವೆ ; ಹೀಗೆ ನಿನಗೆ ಉಂಟಾದ ಆನಂದದಿಂದ ನನಗೂ ಆನಂದ." (ಇಲ್ಲಿ ಕವಿ ಪಕ್ಷಿಯನ್ನು 'ಡ್ರಯಡ್' ಎಂದು ಕರೆದು, ಅತಿ ಮಾನವತೆಗೇರಿಸುವನು.)

"ಪ್ರೊವೆನ್ಸ್‌ನ ಆನಂದದಾಯಕ ದೃಶ್ಯಗಳನ್ನೂ ಗೀತೆಗಳನ್ನೂ ನೆನಪಿಗೆ ತರುವಂತಹ, ಭೂಮಿಯೊಳಗೆ ತಣ್ಣಗೆ ಇಟ್ಟಿರುವಂತಹ ಮದ್ಯದ ಒಂದು ತೊಟ್ಟು ನನಗೆ ಈಗ ದೊರೆತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ! (ದಕ್ಷಿಣ ಫ್ರಾನ್ಸ್‌ನಲ್ಲಿರುವ

ಪ್ರೊವೆನ್ಸ್ ಜಿಲ್ಲೆಯು ಮಧ್ಯ ಯುಗದಲ್ಲಿ ವಿವಿಧ ಪಾನೀಯ ಗಳಿಗೂ, ಮನರಂಜನೆಗೂ ಹೆಸರಾದ ಸ್ಥಳವಾಗಿತ್ತು.) ಕೆಂಪಾ ಗಿರುವ, ಲೋಟದ ತುದಿಯಲ್ಲಿ ನೊರೆಯ ಗುಳ್ಳೆಗಳನ್ನೆಬ್ಬಿಸುವ, ಹೃದಯವನ್ನು ಬೆಚ್ಚಗೆಮಾಡುವ ದಕ್ಷಿಣ ಫ್ರಾನ್ಸ್‌ನ ಪಾನೀಯ ವನ್ನು ಈಗ ನಾನು ಸೇವಿಸಿದ್ದರೆ ಇನ್ನೂ ಎಷ್ಟು ಸುಖವಾಗಿರು ತ್ತಿತ್ತು ! (ಹಿಪ್ಪೊಕ್ರೀನ್ ಎಂಬುದು ಪ್ರಾಚೀನ ಗ್ರೀಕರ ಪ್ರಕಾರ ಕಾವ್ಯದೇವತೆಗಳಿಗೆ ಪವಿತ್ರವೆನಿಸಿದ್ದ, ಹೆಲಿಕಾನ್ ಶಿಖರದ ಬಳಿ ಇದ್ದ ಒಂದು ನೀರಿನ ಚಿಲುಮೆ. ಇದರ ನೀರನ್ನು ಕುಡಿದರೆ ಕಾವ್ಯ ಬರೆಯಲು ಸ್ಫೂರ್ತಿ ದೊರೆಯುತ್ತದೆ ಯೆಂದು ನಂಬಿಕೆಯಿತ್ತು. ಫ್ರಾನ್ಸಿನ ಪಾನೀಯ ಇದಕ್ಕಿಂತ ಹೆಚ್ಚು ಉತ್ತೇಜಕವೆಂದು ಕವಿಯ ಕಲ್ಪನೆ.) ಈ ಮದ್ಯವನ್ನು ಸೇವಿಸಿ, ಇಹಲೋಕವನ್ನು ಮರೆತು, ಯಾರ ಕಣ್ಣಿಗೂ ಬೀಳದಂತೆ ನಿನ್ನೊಡನೆ ಅರಣ್ಯದೊಳಗೆ ಹೋಗಲು ಇಚ್ಛಿಸು ತ್ತೇನೆ.”

“ನಿನಗೇ ತಿಳಿಯದಂತಹ ಜಗತ್ತಿನ ಆಯಾಸ, ಕೋಪ ಹಾಗೂ ದುಃಖಗಳನ್ನು ಹೀಗೆ ಮರೆಯಬೇಕೆಂದು ನನ್ನ ಅಪೇಕ್ಷೆ. ಈ ಜಗತ್ತಿನಲ್ಲಿ ನಡೆಯುತ್ತಿರುವುದಾದರೂ ಏನು?—ಯೌವನವು ಕ್ಷೀಣಿಸಿ, ವೃದ್ಧಾಪ್ಯ ಬರುವುದು ; ಎಲ್ಲೆಲ್ಲೂ ತುಂಬಿದ ದುಃಖ ನಿರಾಸೆ ; ಲಾವಣ್ಯವತಿಯರ ಕಣ್ಣಿನ ಕಾಂತಿ ಕುಂದುವುದು ಹಾಗೂ ಕಳೆದು ಹೋದ ಸೌಂದರ್ಯಕ್ಕಾಗಿ ಪ್ರೇಮಿಗಳು ಪರಿ ತಪಿಸುವುದು.”

“ನಿನ್ನ ಜತೆಗೆ ಬರುವ ವಿಧಾನವನ್ನು ಕುರಿತು ಪುನಃ ಆಲೋಚಿಸಿದ್ದೇನೆ. ನಿನ್ನ ಜತೆಗೂಡಲು ಮದ್ಯ ಅಥವಾ ಔಷಧಿ

ಗಳ ಸಹಾಯ ಪಡೆಯಲು ನನಗೆ ಇಷ್ಟವಿಲ್ಲ. ಇದಕ್ಕಾಗಿ ಕವಿ ಕಲ್ಪನೆಯನ್ನು ಅವಲಂಬಿಸುವೆನು ; ಏಕೆಂದರೆ ನನ್ನ ಹೊರ ಮೆದುಳು ಆತ್ಮದ ಹಾರಾಟವನ್ನು ತಡೆಗಟ್ಟಿದರೂ, ಕವಿ ಕಲ್ಪನೆಯು ಹೊರಗಿನ ಕಣ್ಣಿಗೆ ಬೀಳದಂತೆ ಹೋಗಬಲ್ಲುದು. ಈಗಾಗಲೇ ನಿನ್ನ ಜತೆಯಲ್ಲಿದ್ದೇನೆ. ಈ ರಾತ್ರಿಯಲ್ಲಿ ನಕ್ಷತ್ರ ಗಳಿಂದ ಆವೃತನಾದ ಚಂದ್ರನು ಆನಂದದಾಯಕನಾಗಿದ್ದಾನೆ. ಆದರೆ ನಾನಿರುವ ಸ್ಥಳದಲ್ಲಿ ಬೆಳಕು ಮಂದವಾಗಿದೆ ; ಏಕೆಂದರೆ ಗಾಳಿಗೆ ಅಲ್ಲಾಡುವ ಮರಗಳ ಮೂಲಕ ಬರುವಷ್ಟು ಮಾತ್ರ ಬೆಳಕು ನನಗೆ ದೊರೆಯುತ್ತಿದೆ.”

“ಮಂದ ಪ್ರಕಾಶದ ದೆಸೆಯಿಂದ ನೆಲದ ಮೇಲಾಗಲಿ, ಮರಗಳ ಮೇಲಾಗಲಿ ಇರುವ ಹೂಗಳು ನನಗೆ ಕಾಣಿಸುವುದಿಲ್ಲ. ಆದರೆ ಋತುಮಾನಕ್ಕೆ ತಕ್ಕಂತೆ ಯಾವ ಪುಷ್ಪಗಳು ದೊರಕ ಬಲ್ಲವು ಎಂಬುದನ್ನು ನಾನು ಊಹಿಸಿಕೊಳ್ಳಬಲ್ಲೆ : ಉದಾ ಹರಣೆಗೆ, ಒಂದು ಜಾತಿಯ ಮುಳ್ಳುಪೊದೆ (Hawthorn), ಪರಿಮಳಯುಕ್ತವಾದ ಕಾಡು ಗುಲಾಬಿ (Eglantine), ಮೇ ತಿಂಗಳಲ್ಲಿ ದುಂಬಿಗಳನ್ನು ಆಕರ್ಷಿಸುವ ಬಳ್ಳಿ ಗುಲಾಬಿ (Muskrose).”

“ನನಗೆ ಸಾವು ಬಂದು, ನನ್ನ ಕಷ್ಟಗಳನ್ನೆಲ್ಲಾ ಏಕೆ ನೀಗಿಸಬಾರದು ? ಎಂದು ಎಷ್ಟೋ ಬಾರಿ ಅನಿಸಿತು. ಅಂತೆಯೇ ನನ್ನ ಆತ್ಮವನ್ನು ತೆಗೆದುಕೊಂಡುಹೋಗುವಂತೆ ಆ ಸಾವನ್ನು ಪ್ರಾರ್ಥಿಸಲು ಅನೇಕ ಬಾರಿ ಕಾವ್ಯ ರಚನೆ ಮಾಡಿದೆ. ಆದರೆ ಈಗ ನಿನ್ನ ಗಾನವನ್ನು ಆಲಿಸುತ್ತಿದ್ದಂತೆ, ನಿನ್ನ ಆನಂದವನ್ನು ಹಾಡಿನ ಮೂಲಕ ತೋರಿಸಿಕೊಳ್ಳುತ್ತಿರುವಾಗ ನಾನೂ ಸುಖ

ವಾಗಿ ಕಾಲ ಕಳೆಯಬೇಕೆನ್ನಿಸಿದೆ. ನೀನು ಹಾಡುತ್ತಾ ಇರು: ಹಾಗೆಯೇ ನಾನು ಮರಣವನ್ನಪ್ಪಿದಾಗ, ನಿನ್ನ ಹಾಡು ನನಗೆ ಚರಮಗೀತೆಯಾಗಿ ನನ್ನ ಶರೀರ ಮಣ್ಣಾಗಲಿ."

"ನೀನು ಅಮರ ಪಕ್ಷಿ; ನಿನಗೆ ಸಾವೆಂಬುದು ಇಲ್ಲ. ಉಳಿವಿಗಾಗಿ ಜನ ನಡೆಸುವ ಹೋರಾಟವೂ ನಿನಗೆ ತಟ್ಟಲಾರದು. ನಾನು ಈ ರಾತ್ರಿ ಕೇಳುತ್ತಿರುವ ಗಾನರಸವನ್ನು ಹಿಂದೆ ಎಲ್ಲಾ ಅಂತಸ್ತಿನ ಜನರೂ ಅನುಭವಿಸಿದ್ದಾರೆ. ಹಿಂದೆ ಪರದೇಶದಲ್ಲಿರ ಬೇಕಾಗಿ ಬಂದು ಸದಾ ಮನೆಗಾಗಿ ಹಂಬಲಿಸುತ್ತಿದ್ದ ರುತ್‌ಳನ್ನು ಸಾಂತ್ವನಗೊಳಿಸಿದ ಹಾಡೂ ಪ್ರಾಯಶಃ ಇದೇ ಇದ್ದಿರಬೇಕು! ಪ್ರಾಯಶಃ ಹತಾಶರಾಗಿ ಕೋಟೆ ಮನೆಯ ಕಿಟಕಿಯಿಂದ ಅಪಾಯಕಾರಿಯಾದ ಸಮುದ್ರವನ್ನು ನೋಡುತ್ತಿದ್ದ ಸ್ತ್ರೀಯ ರನ್ನು ಆನಂದಗೊಳಿಸಿದ ಹಾಡೂ ಇದೇ ಇದ್ದಿರಬೇಕು!"

"ಹತಾಶರಾಗಿ ಎಂಬ ಶಬ್ದವೇ ನನ್ನ ಮನಸ್ಸನ್ನು ನಿನ್ನ ಸಮೀಪದಿಂದ ಮರಳಿ ಹಿಂದಕ್ಕೆ ತರುವುದು. ಈಗ ನಿನ್ನನ್ನು ಬೀಳ್ಕೊಡುತ್ತೇನೆ. ವಂಚನೆ ಮಾಡುವುದರಲ್ಲಿ ಪ್ರಸಿದ್ಧವಾದ ಕಲ್ಪನೆಯೂ ಈಗ ಆ ಕೆಲಸವನ್ನು ಸರಿಯಾಗಿ ಮಾಡ ಲಾರದು. ಹೋಗಿ ಬಾ, ನೀನು ಹುಲ್ಲುಗಾವಲುಗಳು, ಪ್ರಶಾಂತ ವಾದ ನದಿಗಳನ್ನು ದಾಟಿ ಬೆಟ್ಟದ ಮೇಲೆ ಹೋದಂತೆಲ್ಲಾ ನಿನ್ನ ಗೀತೆ ಕೇಳಿಸುವುದು ಕಡಿಮೆಯಾಗುತ್ತಾ ಹೋಗುವುದು. ಕೊನೆಗೆ ಕಣಿವೆಗಳಲ್ಲಿ ಇಲ್ಲದಂತಾಗುವುದು. ಆಗ ಆಲೋಚನೆ ನನಗೆ—ಇದೇನು ಒಂದು ದರ್ಶನವೋ ಅಥವಾ ಸ್ವಪ್ನವೋ ಎಂದು; ನಾನು ಎಚ್ಚರವಾಗಿದ್ದೇನೆಯೋ ? ಅಥವಾ ನಿದ್ರಿಸು ತ್ತಿದ್ದೇನೆಯೋ ಎಂದು."

ಹೀಗೆ ಕವಿ ಕೀಟ್ಸನು ನೈಟಿಂಗೇಲ್ ಪಕ್ಷಿಯು ಗಾನದ ಪ್ರಭಾವಕ್ಕೆ ಸಿಕ್ಕಿ, ವಾಸ್ತವಿಕ ಜಗತ್ತನ್ನು ಮರೆತು ಕಲ್ಪನಾ ಲೋಕದಲ್ಲಿ ವಿಹರಿಸುವನು. ಈ ಸುಂದರ ಕಲ್ಪನೆಯ ಶಿಖರಕ್ಕೆ ಸಹೃದಯರನ್ನೂ ಕರೆದೊಯ್ಯುವನು. ನೈಟಿಂಗೇಲ್ ಪಕ್ಷಿಯು ಬೇರೆ ಬೇರೆ ಕವಿಗಳ ದೃಷ್ಟಿಗೆ ಬೇರೆ ಬೇರೆ ರೀತಿಯಲ್ಲಿ ಕಾಣಿಸಿರ ಬಹುದು ; ಆದರೆ ಕೀಟ್ಸ್ ಕವಿಯು ಅದರ ಗಾನದ ಸವಿಯನ್ನು ಆಸ್ವಾದಿಸಿದ ರೀತಿ ಹಾಗೂ ಅದಕ್ಕೆ ತಕ್ಕಂತೆ ಬಳಸಿರುವ ಪ್ರಗಾಥ (Ode) ದ ಮಾಧ್ಯಮ ಕಾವ್ಯಪ್ರಪಂಚಕ್ಕೇ ಒಂದು ವಿಧವಾದ ಶೋಭೆಯನ್ನು ಕೊಟ್ಟಿವೆಯೆಂದು ಧಾರಾಳವಾಗಿ ಹೇಳಬಹುದು.

ಈ ಪ್ರಗಾಥದಲ್ಲಿಯೂ ಕವಿ Lethe-wards, light-winged, full-throated ಮುಂತಾದ ಸಂಯುಕ್ತ ಶಬ್ದ ಗಳನ್ನು ಪರಿಣಾಮಕಾರಿಯಾಗಿ ಬಳಸಿದ್ದಾನೆ. ಅಲ್ಲದೆ—ed ಅಂತ್ಯವಿರುವ ಹೆಚ್ಚಿನ ಮಾತ್ರೆಯ ಶಬ್ದ ಪ್ರಯೋಗ ಕವಿಯ ತೀವ್ರ ಭಾವಾಭಿವ್ಯಕ್ತಿಯ ಪ್ರಯತ್ನಕ್ಕೆ ಉದಾಹರಣೆ.

ನೈಟಿಂಗೇಲ್ ಪಕ್ಷಿಯ ಗಾನಕ್ಕೆ ಮಾನವನ ಜಗತ್ತಿನಲ್ಲಿ ಶ್ರೋತೃವು ತೋರುವ ಪ್ರತಿಕ್ರಿಯೆಯೇ ಈ ಕವನವೆಂದು ಹೇಳಬಹುದು. ಇದು ನಲಿವು-ನೋವಿಗೂ, ಜೀವನ-ಮೃತ್ಯು ವಿಗೂ ಹತ್ತಿರದ ಸಂಬಂಧವನ್ನು ಕಲ್ಪಿಸಿದೆ. ಇಲ್ಲಿ ಮದ್ಯವು ಕವಿಯ ಮನಸ್ಸನ್ನು ನೈಟಿಂಗೇಲ್ ಪಕ್ಷಿಯ ಪ್ರಪಂಚಕ್ಕೆ ಹೋಗಲು ಅವಕಾಶ ನೀಡುವುದು. ಏಳನೇ ಪದ್ಯದಲ್ಲಿ, ಪಕ್ಷಿಯು ತನ್ನ 'ಆತ್ಮವನ್ನು ಸುರಿಯುತ್ತಿದೆ' ; ಈ ಮಹತ್ತಾದ ಕ್ಷಣದಲ್ಲಿ, ಗಾನವನ್ನು ಕತ್ತಲಲ್ಲಿ ಆಲೈಸುತ್ತಿರುವ ಕವಿಯು ಸಾವೇ

ಸಂಪತ್ತೆಂಬುದನ್ನು ಮನಗಾಣುತ್ತಾನೆ. ಈ ಸಂದರ್ಭದಲ್ಲಿ ರಾಬರ್ಟ್ ಬ್ರಿಜಸ್ ಅವರು ಹೇಳುವ ಮಾತನ್ನು ಗಮನಿಸಬಹುದಾಗಿದೆ: "ಅತಿ ಹೆಚ್ಚಿನ ಸೌಂದರ್ಯವು ಹೊರಹೊಮ್ಮುವುದು ನೋವಿನಿಂದ, ನಲಿವಿನಿಂದಲ್ಲ; ದುಃಖದಿಂದ, ಸುಖದಿಂದಲ್ಲ; ಆಸೆಯಿಂದ, ತೃಪ್ತಿಯಿಂದಲ್ಲ." ಕ್ಲಿಯಂತ್ ಬ್ರೂಕ್ಸ್ ಅವರು ಹೇಳುವಂತೆ, "ಪಕ್ಷಿ ಮನುಷ್ಯನಂತಲ್ಲ; ಅದು ಪ್ರಕೃತಿಯಲ್ಲೇ ಲೀನವಾಗಿರುವುದು. ಹೀಗೆ ಪಕ್ಷಿಯು ಅಮರ ಮತ್ತು ಪ್ರಕೃತಿಯ ಅಮರತ್ವದಲ್ಲಿ ತಾನೂ ಪಾಲುಗೊಳ್ಳುವುದು."

7. ಆಟಂ ಋತುವನ್ನು ಕುರಿತು

ಕವಿಗಳು ಪ್ರಕೃತಿ ಸೌಂದರ್ಯವನ್ನು ವರ್ಣಿಸುವಾಗ ವಸಂತ ಕಾಲದ ಸೊಬಗಿಗೆ ಮಾರುಹೋಗಿರುವುದನ್ನು ನಾವು ಎಲ್ಲೆಲ್ಲಿಯೂ ನೋಡಿದ್ದೇವೆ; ಋತುವೆಂದರೆ ವಸಂತ ಎಂಬುದು ಅವರಿಗೆ ಬಾಯಿಪಾಠವಾದಂತಿದೆ. ಹಾಗೆಯೇ ಮಹಾಕವಿ ಕಾಳಿದಾಸನದೆಂದು ಅನೇಕರು ಅಭಿಪ್ರಾಯಪಟ್ಟಿರುವ "ಋತು ಸಂಹಾರ" ಕಾವ್ಯದಲ್ಲಿ ಎಲ್ಲ ಋತುಗಳ ವರ್ಣನೆಯಿದೆ. ಇದರಂತೆಯೇ ವಸಂತವಲ್ಲದೆ ಬೇರೆ ಋತುಗಳ ಕಡೆಗೂ ಗಮನ ಹರಿಸಿದ ಕೀರ್ತಿ ಆಂಗ್ಲ ರೊಮ್ಯಾಂಟಿಕ್ ಪಂಥದ ಕೀಟ್ಸ್ ಕವಿಗೆ ಸಲ್ಲುತ್ತದೆ. ಕೀಟ್ಸನು ತನ್ನ "ಶರತ್ಕಾಲವನ್ನು ಕುರಿತು" (To Autumn) ಎಂಬ ಪ್ರಗಾಥ ಕಾವ್ಯದಲ್ಲಿ, ತಾನು ಕಂಡ ಆ ಋತುವಿನ ಸೊಬಗನ್ನು ಮನೋಹರವಾಗಿ ವರ್ಣಿಸಿರುವನು. (ಇಲ್ಲಿ "ಆಟಂ" ಎಂದರೆ ಇಂಗ್ಲೆಂಡಿನ ಆಗಸ್ಟ್, ಸೆಪ್ಟೆಂಬರ್ ಹಾಗೂ ಅಕ್ಟೋಬರ್ ಮಾಸಗಳು ; ಇದು ನಮ್ಮ ದೇಶದ 'ಶರತ್ಕಾಲಕ್ಕೆ' ಸುಮಾರಾಗಿ ಸರಿಹೊಂದಬಹುದೆಂದು ಈ ಶಬ್ದ ವನ್ನು ಬಳಸಲಾಗಿದೆ.)

22 ಸಾಲುಗಳುಳ್ಳ "ಟು ಆಟಂ" ಕಾವ್ಯದಲ್ಲಿ ಆ ಋತು ವನ್ನು ಪ್ರಗಾಥ-ಕಾವ್ಯ(Ode)ದ ಪದ್ಧತಿಯಂತೆ ಕೀಟ್ಸನು ಸಂಬೋಧನೆ ಮಾಡಿರುವನು. ಕವಿ ಹೇಳುವಂತೆ, ಆಗ ಆ ದೇಶದಲ್ಲಿ ಎಲ್ಲೆಲ್ಲಿಯೂ ಮಂಜು ಕವಿದಿರುವುದು ; ಮರಗಳ

ಮೇಲೆ ಹಣ್ಣುಗಳು ಮಾಗಿರುವುವು. ಕವಿಯು ಕಣ್ಣಿಗೆ ಋತುವು ಪ್ರೌಢಾವಸ್ಥೆಗೆ ಹೋಗುತ್ತಿರುವ ಸೂರ್ಯನ ಆಪ್ತಸ್ನೇಹಿತನಂತೆ ತೋರುವುದು. ದ್ರಾಕ್ಷಿಬಳ್ಳಿಗಳನ್ನು ಹಣ್ಣುಗಳಿಂದ ತುಂಬಿಸಿ ಆಶೀರ್ವದಿಸುವುದು ಹೇಗೆಂಬುದೇ ಈ ಆಪ್ತರಿಬ್ಬರ ರಹಸ್ಯ-ಸಂಭಾಷಣೆ. ಇಷ್ಟೇ ಅಲ್ಲ, ಸೇಬಿನ ಮರಗಳನ್ನು ಹಣ್ಣುಗಳ ಭಾರದಿಂದ ಬಗ್ಗಿಸುವುದು, ಪ್ರತಿಯೊಂದು ಹಣ್ಣನ್ನೂ ಪೂರ್ಣವಾಗಿ ಪಕ್ವವಾಗುವಂತೆ ಮಾಡುವುದು ; ಸೋರೆಕಾಯಿಯನ್ನು ದೊಡ್ಡದಾಗಿ ಬೆಳೆಸುವುದು; ಹೇಜಲ್ ಪೊದೆಯ ಚಿಪ್ಪುಗಳನ್ನು ಸಿಹಿ ತಿರುಳಿನಿಂದ ತುಂಬುವುದು ; ದುಂಬಿಗಳಿಗೆ ಯಾವಾಗಲೂ ಬಿಸಿಲಿನ ದಿನಗಳೇ ಕಾಣಿಸುವಂತೆ ಮುಂದೆ ಹೂವಾಗುವ ಮೊಗ್ಗುಗಳನ್ನು ಉತ್ಪತ್ತಿಮಾಡುವುದು—ಹೀಗೆ ಶರತ್ಕಾಲ ಹಾಗೂ ಸೂರ್ಯರ ಆಪ್ತ ಸಂಭಾಷಣೆಯಲ್ಲಿ ಬರುವುದು ವಿವಿಧವಾದ ವಿಚಾರಲಹರಿ.

ಕವಿ ಹೇಳುವಂತೆ, ಈ ಶರತ್ಕಾಲ ಪುರುಷನ ನಾನಾ ಲೀಲೆಗಳನ್ನು ಯಾರು ತಾನೆ ನೋಡಿಲ್ಲ ? ಈ ವ್ಯಕ್ತಿಯು ಸುಗ್ಗಿಯ ಕಾಲದಲ್ಲಿ ಒಕ್ಕುವ ಅಂಗಳದಲ್ಲಿ ಹಾಯಾಗಿ ಕುಳಿತಿರುವಂತೆಯೇ ತೂರುವ ಗಾಳಿಯು ಈತನ ತಲೆಗೂದಲನ್ನು ಮೃದುವಾಗಿ ಎತ್ತುವುದು. ಅಥವಾ ಅರ್ಧ ಕೊಯಿಲು ಆದ ಭೂಮಿಯ ಮೇಲೆ ಗಸಗಸೆ ಗಿಡದ ಅಫೀಮು ವಾಸನೆಯಿಂದ ಈತನಿಗೆ ಮತ್ತು ಬಂದಂತಾಗಿ ಗಾಢನಿದ್ರೆಯಲ್ಲಿರುವನು. ಕೆಲವು ವೇಳೆ, ಕೊಯಿಲಿನ ಸಮಯದಲ್ಲಿ ಭೂಮಿಯಲ್ಲಿ ಬಿಟ್ಟಿರಬಹುದಾದ ಬೆಳೆಯ ತೆನೆಗಳನ್ನು ಸಂಗ್ರಹಿಸುವವನಂತೆ, ಈತನು ತನ್ನ ತಲೆಯನ್ನು ತೊರೆಯೊಂದಕ್ಕೆ ಅಡ್ಡಲಾಗಿ ಇಟ್ಟುಕೊಂಡಿರುವನು. ಅಥವಾ ಸೇಬಿನ ಹಣ್ಣಿನ ಪಾನೀಯವನ್ನು ಮಾಡಲು ಹಣ್ಣನ್ನು

ಯಂತ್ರದಲ್ಲಿ ಹಿಂಡುತ್ತಿರುವಾಗ ಕೊನೆಯಲ್ಲಿ ಒಸರಿಸುವ ರಸವನ್ನು ಗಂಟೆಗಟ್ಟಲೆ ನೋಡುತ್ತಾ ಕಾಲ ಕಳೆಯುವನು. ಅಂದರೆ ಬೆಳೆಯನ್ನು ಕೊಯ್ಯುವುದು, ಕಣದಲ್ಲಿ ತೂರುವುದು, ಭೂಮಿಯಲ್ಲಿ ಕೊಯ್ಯದೆ ಬಿಟ್ಟಿರಬಹುದಾದ ತೆನೆಗಳನ್ನು ಸಂಗ್ರಹಿಸುವುದು, ಸೇಬಿನ ಹಣ್ಣಿನ ಪಾನೀಯವನ್ನು ತಯಾರಿಸುವುದು ಮುಂತಾದ ಈ ಋತುವಿನ ಕಾರ್ಯಗಳ ಕಡೆಗೆ ಕವಿ ಓದುಗರ ಗಮನವನ್ನು ಸೆಳೆಯುವನು.

ಏನು ! ವಸಂತದ ಗಾನಗಳನ್ನೇ ಕೊಂಡಾಡುತ್ತಾರಲ್ಲ, ಈಗ ಅವೆಲ್ಲಿ ? ಎಂದು ಕವಿ ಕೊನೆಯಲ್ಲಿ ಉದ್ಗಾರ ತೆಗೆಯುವನು. ಈ ಗಾನಗಳನ್ನೇ ಕುರಿತು ಶರದೃತು ಆಲೋಚಿಸಬೇಕಾಗಿಲ್ಲ. ಏಕೆಂದರೆ ಈ ಋತುವಿನದೇ ಒಂದು ವಿಶಿಷ್ಟ ಸಂಗೀತವಿದೆಯೆಂಬುದು ಕವಿಯ ಸ್ಪಷ್ಟವಾಣಿ. ಈ ಋತುವಿನ ಗಾನ ನಡೆಯುವಾಗ ವರ್ಣರಂಜಿತ ಮೋಡಗಳು ಸೂರ್ಯಾಸ್ತಮಾನವನ್ನು ಅರಳಿಸುವುವು : ಕೂಳೆಗಳಿರುವ ಭೂಮಿಗೆ ಇವುಗಳಿಂದ ಸುಂದರ ವರ್ಣ ಉಂಟಾಗುವುದು. ವಸಂತ ಮಾಸದಲ್ಲಾದಂತೆ ಕೋಕಿಲ ಗಾನದಂತಹ ಸಂಗೀತವೇನೋ ಕೇಳಿಸುವುದಿಲ್ಲ. ಆದರೆ, ನದಿಯಲ್ಲಿ ಬಂದ ಮರಮುಟ್ಟುಗಳ ಮೇಲೆ ಇರುವ ಕೀಟಗಳ ದುಃಖದಾಯಕ ಅರಚಾಟ; ಗುಡ್ಡದ ಕಡೆಯಿಂದ ಬಲಿತ ಕುರಿಗಳು ಗಟ್ಟಿಯಾಗಿ ಕೂಗುತ್ತಿರುವುದು ; ಬೇಲಿಯ ಸಾಲಿನಲ್ಲಿರುವ ಮಿಡತೆಗಳು ಜಿರ್ರೆಂದು ಹಾಡುತ್ತಿರುವುದು ; ಕೈದೋಟದಿಂದ ರೆಡ್‌ಬ್ರೆಸ್ಟ್ ಎಂಬ ಹಕ್ಕಿಗಳು ಸಿಳ್ಳೆ ಹಾಕುತ್ತಿರುವುದು ; ಸ್ವಾಲೊ ಹಕ್ಕಿಗಳು ಆಕಾಶದಲ್ಲಿ ಚಿಲಿಪಿಲಿಗುಟ್ಟುತ್ತಿರುವುದು—ಇವೆಲ್ಲಾ ಕವಿ ಕೀಟ್ಸನ ಸೂಕ್ಷ್ಮ ಕಿವಿಗಳಿಗೆ ಸಂಗೀತ. ಶರತ್ಕಾಲದ ಈ ಶಬ್ದಗಳಲ್ಲೇ ಸಂಗೀತವನ್ನು ಕಂಡು

ಕೊಂಡು ಅದರಲ್ಲಿ ತನ್ಮಯನಾಗುವ ಕವಿ ಕೇವಲ ವಸಂತಗಾನಕ್ಕೆ ಮಾತ್ರ ಹೇಗೆ ಮರುಳಾದಾನು ? ಇದರಿಂದಾಗುವ ಹೃದಯ ಸಂವೇದನೆಯನ್ನು ಸಹೃದಯರು ಕವಿಯ ಸಹಾಯದಿಂದ ಪಡೆಯುವರು.

ಹೀಗೆ ಜಗತ್ತು ವಿಶೇಷವಾಗಿ ಕೆಲವನ್ನು ಮಾತ್ರ ಮೆಚ್ಚುತ್ತಿದ್ದರೆ, ಎಲ್ಲದರಲ್ಲಿಯೂ ಗುಣಸೌಂದರ್ಯಗಳನ್ನು ಕಾಣುವ ಕಣ್ಣು ಕೀಟ್ಸ್‌ನಂತಹ ಕವಿಗಳಿಗೆ ಮಾತ್ರ ಇರಬಲ್ಲುದು. ಅವನ ಪ್ರಕಾರ "ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯ." ಕೀಟ್ಸ್‌ನ ಈ "ಟು ಆಟಂ" ಎಂಬ ಕಾವ್ಯದಲ್ಲಿರುವ ಮೂರು ಪದ್ಯಗಳಲ್ಲಿ ಪ್ರತಿಯೊಂದೂ ತಾನೇ ಪೂರ್ಣವಾಗಿ ಇರುವುದು; ಅಲ್ಲದೆ ಉಳಿದವುಗಳ ಜೊತೆಗೆ ತರ್ಕಬದ್ಧವಾಗಿ ಸೇರಿಕೊಂಡು ಇರುವುದು. ಪ್ರಗಾಥಕಾವ್ಯ(Ode)ದ ಮಾಧ್ಯಮವನ್ನು ಕಾವ್ಯವಸ್ತುವಿಗೆ ಬಳಸಿಕೊಳ್ಳುವುದರಲ್ಲಿ ಕವಿ ಎಷ್ಟು ಸಫಲನಾಗಿದ್ದಾನೆಂದರೆ ಇದನ್ನು "ಅವನ ಪ್ರಗಾಥಗಳಲ್ಲೆಲ್ಲಾ ನಿರೂಪಣೆಯಲ್ಲೂ, ರಚನೆಯಲ್ಲೂ ಅತ್ಯಂತ ಪೂರ್ಣವಾದುದು" ಎಂದು ವಿಮರ್ಶಕರು ಮುಕ್ತಕಂಠದಿಂದ ಹೊಗಳಿದ್ದಾರೆ. "ಎಲ್ಲಾ ನಿಷ್ಪ್ರಯೋಜಕ ಪ್ರಶ್ನೆಗಳನ್ನು ಬದಿಗೊತ್ತಿ, ಅವನು ಋತುವಿನ ಸೌಂದರ್ಯ ಮತ್ತು ಶಾಂತಿಗಳನ್ನು ಅನುಭವಿಸುವುದರಲ್ಲಿ ತೃಪ್ತನಾಗಿದ್ದಾನೆ" ಎಂದು ಈ ಕಾವ್ಯದ ಬಗೆಗೆ ಸೆಲಿನ್ ಕೋರ್ಟ್ ಹೇಳುವ ಮಾತು ಅಕ್ಷರಶಃ ನಿಜ.

ಈ ಪ್ರಗಾಥವು ಆಟಂ ಋತುವಿನ ಪರಸ್ಪರ ವಿರುದ್ಧವಾದ ಗುಣಗಳನ್ನು ನಿರೂಪಿಸುವುದು. ಅದು ತಾನೂ ಮರಣ ಹೊಂದಿ ಉದ್ದೇಶ ಸಾಫಲ್ಯ ಮಾಡಿಕೊಳ್ಳುವ ಋತು. ಇಲ್ಲಿ

ರಸ ಒಸರುವುದರ ನಿರೂಪಣೆಯೂ ಕಾಲ ಕಳೆಯುವುದರ ಸಂಕೇತ. ಆರ್ಥರ್ ಕಾಂಪ್ಟನ್-ರಿಕೆಟ್ ಅವರು ಹೇಳುವಂತೆ "ಇದರ ಮೊದಲನೇ ಪದ್ಯದಲ್ಲಿ ವರ್ಣಮೇಳ, ಎರಡನೆಯದರಲ್ಲಿ ಚಲನೆ, ಮೂರನೆಯದರಲ್ಲಿ ಸ್ವರಮೇಳ" – ಇವುಗಳನ್ನು ಆಸ್ವಾದಿಸಬಹುದು. ಈ ವಸ್ತುನಿಷ್ಠವಾದ ಹಾಗೂ ವರ್ಣನಾತ್ಮಕವಾದ ಕಾವ್ಯದಲ್ಲಿ ಭಾವದ ಶ್ರೀಮಂತಿಕೆ ಹಾಗೂ ಲಯದ ಔಚಿತ್ಯಗಳು ಸಹೃದಯರ ಮೆಚ್ಚಿಗೆ ಪಡೆದಿವೆ.

8. ಖಿನ್ನತೆಯು ಮೇಲಿನ ಪ್ರಗಾಥ

"ಖಿನ್ನತೆಯನ್ನು ಕುರಿತ ಪ್ರಗಾಥ"ವು ಕೀಟ್ಸನಿಂದ 1819 ರಲ್ಲಿ ರಚಿಸಲ್ಪಟ್ಟು ಮರು ವರ್ಷವೇ ಪ್ರಕಟವಾಯಿತು. ಈ ಪ್ರಗಾಥವು ಕವಿಯ ಲೇಖನಿಯಿಂದ ಹೇಗೆ ಹೊರಹೊಮ್ಮಿತು ಎಂಬ ವಿಚಾರದಲ್ಲಿ ನಾನಾ ಅಭಿಪ್ರಾಯಗಳಿವೆ. ಆ ಕಾಲದಲ್ಲಿ ಕೀಟ್ಸ್ ಓದುತ್ತಿದ್ದ ಬರ್ಟನ್‌ನ "ಅನಾಟಮಿ ಆಫ್ ಮೆಲಾಂಕಲಿ" ಎಂಬ ಗ್ರಂಥದ ಪ್ರಭಾವವಿರಬಹುದು ಎಂದು ಕೆಲವು ವಿಮರ್ಶಕರು ಹೇಳುವರು. ಆಗ ಕವಿ ಅನುಭವಿಸಿದ ಕೆಲವು ದುಃಖದಾಯಕ ಘಟನೆಗಳೇ ಕಾರಣವೆಂದು ಇನ್ನು ಕೆಲವರ ಅಭಿಪ್ರಾಯ. ಇವರ ಪ್ರಕಾರ ಕೀಟ್ಸನ ಸಹೋದರ ಟಾಮ್ ಕ್ಷಯರೋಗದಿಂದ ಅಕಾಲ ಮರಣಕ್ಕೆ ಬಲಿಯಾದದ್ದು, ಇನ್ನೊಬ್ಬ ಸಹೋದರ ಜಾರ್ಜ್ ಮದುವೆಮಾಡಿಕೊಂಡು ಈತನನ್ನು ಬಿಟ್ಟುಹೋದದ್ದು, ತನಗೆ ಕ್ಷಯರೋಗ ಬಂದದ್ದು, ಆಗ ತಾನೆ ಈತನ ಹೃದಯವನ್ನು ಸೂರೆಗೊಂಡಿದ್ದ ಫ್ಯಾನಿ ಬ್ರಾನ್‌ಳನ್ನು ತಾನು ಪಡೆಯಲಾರದ ನಿರಾಶೆ – ಈ ಎಲ್ಲಾ ಯಾತನೆಗಳು ಒಟ್ಟಾಗಿ ಒಂದೇ ಕಾಲದಲ್ಲಿ ಕವಿಯ ಮೇಲೆ ಪರಿಣಾಮ ಮಾಡಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಹೀಗೆ ಖಿನ್ನತೆಯ ಕಹಿಯ ಅನುಭವಕ್ಕೆ ಸುಖ ಸಂತೋಷಗಳ ರುಚಿಯಿದ್ದರೇ ಸಾಧ್ಯವೆಂಬ ಸತ್ಯವನ್ನು ಕವಿ ಚಿತ್ರಿಸಿದ ಕೃತಿಯಿದು. ಕವಿಯ ಕೈಬರಹದಲ್ಲಿದ್ದ ಈ ಕಾವ್ಯದ ನಾಲ್ಕು ಪದ್ಯಗಳಲ್ಲಿ ಭೀಕರತೆಯ ಚಿತ್ರಣವಿದ್ದ ಮೊದಲನೇ ಪದ್ಯ ಕವಿಗೆ ಪ್ರಕಟನೆಯ

ಕಾಲದಲ್ಲಿ ಅಸಮಂಜಸವೆಂದು ತೋರಿದ್ದರಿಂದ ಅದನ್ನು ಬಿಟ್ಟೇ ಬಿಟ್ಟನು. ಹೀಗಾಗಿ ಪ್ರಕಟಿತ ಕವನವು ಮಧ್ಯದಲ್ಲಿ ಇದ್ದಕ್ಕಿದ್ದಂತೆಯೇ ಪ್ರಾರಂಭವಾದಂತೆ ಕಾಣಿಸುತ್ತದೆ. ಪ್ರಗಾಥದ ಸಂಪ್ರದಾಯದಂತೆ ಇಲ್ಲಿ ಸಂಬೋಧನೆಯಿದೆ.

ಪ್ರಕಟಿತ ಕವನದ ಮೊದಲನೇ ಪದ್ಯದಲ್ಲಿ ನಾವು ಖಿನ್ನತೆಯ ನಿಜವಾದ ರುಚಿಯನ್ನು ಪಡೆಯಲು ಏನೇನನ್ನು ಮಾಡಕೂಡದು ಎಂಬುದನ್ನು ಕೀಟ್ಸ್ ವಿವರಿಸುವನು. ಕವಿ ಹೇಳುವಂತೆ ದುಃಖದ ಅತಿರೇಕದಿಂದ ನಮ್ಮ ಆತ್ಮವನ್ನು ನಿಷ್ಕ್ರಿಯಗೊಳಿಸಬಾರದು ; ಇದು ಖಿನ್ನತೆಯ ಕೋಮಲ ವೇದನೆಯನ್ನು ಮರೆಯುವಂತೆ ಮಾಡುವುದು. ವಿಷಪೂರಿತ ಗಿಡಗಳಿಂದ ಪಾನೀಯವನ್ನು ತಯಾರಿಸುವುದೂ ಕೂಡದು. ಅವುಗಳನ್ನು ಹಣೆಗೆ ಕಟ್ಟಿಕೊಳ್ಳಲೂ ಬಾರದು. ಸಾವಿನ ಸಂಕೇತವಾದ ಯೂ (yew) ಮರದ ಕಾಯಿಗಳಿಂದ ಮಾಲೆ ಮಾಡಿಕೊಂಡು ದುಃಖಗಳನ್ನು ಎಣಿಸಬಾರದು. (ಅಂದರೆ ಸಾವು ನೋವುಗಳ ಆಲೋಚನೆಗಳನ್ನೇ ಪೂರ್ತಿಯಾಗಿ ಮನಸ್ಸಿಗೆ ತಂದುಕೊಳ್ಳಬಾರದು.) ಮರಣ ದುಃಖಗಳ ಸಂಕೇತಗಳಾದ ಜೀರುಂಡೆ ಪತಂಗ ಮುಂತಾದವುಗಳನ್ನು ನಮ್ಮ ಮನಸ್ಸಿನಿಂದ ದೂರದಲ್ಲಿಟ್ಟಿರಬೇಕು. ಅಂಧಕಾರ ಹಾಗೂ ಖಿನ್ನತೆಯ ಪ್ರತೀಕವಾದ ಗೂಬೆಯಿಂದ ನಮ್ಮ ದುಃಖಗಳು ಉಕ್ಕದಂತೆ ನೋಡಿಕೊಳ್ಳಬೇಕು. ನಮ್ಮ ಮನಸ್ಸಿನ ಕತ್ತಲೆಗೆ ವಿಶೇಷ ವಿಸ್ಮಯದ ಮೆರಗನ್ನು ಕೊಡಬಾರದು. ದುಃಖಯುಕ್ತವಾದ ಯಾವ ಆಲೋಚನೆಯಾಗಲಿ ವಸ್ತುವಾಗಲಿ ಅದು ನಮ್ಮ ಮನಸ್ಸನ್ನು ತಗ್ಗಿಸದಂತೆ ನೋಡಿಕೊಳ್ಳಬೇಕು. ಜೀವನದ ದುರಂತಗಳ ಕಡೆ ಮನಸ್ಸನ್ನು ಸರ್ವಥಾ ಹೋಗಗೊಡಬಾರದು.

ಹಾಗೆ ಮಾಡುವುದರಿಂದ ನಮ್ಮ ಆತ್ಮವು ಖಿನ್ನವಾಗಿ ಖಿನ್ನತೆಯ ನಿಜವಾದ ಅನುಭವ ನಮಗೆ ಉಂಟಾಗದೆ ಹೋಗುವುದು.

ಎರಡನೇ ಪದ್ಯದಲ್ಲಿ ಖಿನ್ನತೆಯು ಒಂದು ಸುಕೋಮಲ ಭಾವನೆಯೆಂದೂ ಅದನ್ನು ಸುಂದರ ವಸ್ತುಗಳಿಂದಲೇ ಪರಿಪೋಷಿಸಬೇಕೆಂದೂ ಕವಿ ಹೇಳುವನು. ಕವಿಯು ಭಾವಿಸುವಂತೆ ಖಿನ್ನ ಮನಸ್ಸಿನ ಸ್ಥಿತಿಯು ನೀರು ತುಂಬಿದ ಮೋಡವನ್ನು ಹೋಲುತ್ತದೆ. ಮೋಡದಿಂದ ಬೀಳುವ ಮಳೆ ಹನಿಗಳು ಪುಷ್ಪಗಳನ್ನು ಪುನಶ್ಚೇತನಗೊಳಿಸುವಂತೆ ಖಿನ್ನತೆಯು ಬಾಡಿಹೋಗುತ್ತಿರುವ ನಮ್ಮ ಭಾವನೆಗಳಿಗೆ ಜೀವ ತುಂಬುತ್ತದೆ. ಮಳೆ ಬಿದ್ದಾಗ ಪ್ರಕೃತಿಯ ವಸ್ತುಗಳ ಸೌಂದರ್ಯವು ಸ್ವಲ್ಪಮಟ್ಟಿಗೆ ಕ್ಷಣಕಾಲ ಕುಂದಬಹುದು; ಅದರಂತೆ ಖಿನ್ನತೆಯು ನಮ್ಮ ಆನಂದದ ಆಲೋಚನೆಗಳ ಮೇಲೆ ಹಾಕುವುದೂ ತೆಳುವಾದ ಮುಸುಕು; ಅದೂ ಅಲ್ಪಕಾಲ ಮಾತ್ರ. ಕವಿಯ ಪ್ರಕಾರ ನಾವು ಖಿನ್ನರಾಗಿದ್ದಾಗ ಮಾಡಬೇಕಾಗಿರುವ ಕಾರ್ಯಗಳು ನಾಲ್ಕು: ಮೊದಲನೆಯದಾಗಿ ಬೆಳಗಿನ ಹೊಸ ಗುಲಾಬಿಯ ಅಂದವನ್ನು ಆಸ್ವಾದಿಸುತ್ತಾ ನಮ್ಮ ಖಿನ್ನತೆಯ ಪೂರ್ಣ ಸವಿಯನ್ನು ಅನುಭವಿಸಬೇಕು. ಅಥವಾ ಸಮುದ್ರದ ಸಮೀಪದಲ್ಲಿ ಸೂರ್ಯ ರಶ್ಮಿಗಳಿಂದಾದ ಕಾಮನ ಬಿಲ್ಲಿನ ಅಥವ ಗುಂಡಾಗಿರುವ ಪಿಯೊನಿ ಪುಷ್ಪಗಳ ಸೌಂದರ್ಯದ ಆರಾಧನೆ ಮಾಡುವುದು. ಇಲ್ಲವೇ, ನಮ್ಮ ನಲ್ಲೆಯು ಸಿಟ್ಟಿಗೆದ್ದಾಗ ಆಕೆಯ ಕಣ್ಣುಗಳ ಮನಮೋಹಕ ಸೌಂದರ್ಯದಿಂದ ನಮ್ಮ ಕಣ್ಣುಗಳನ್ನು ತಣಿಸಿಕೊಳ್ಳಬೇಕು.

ಮೂರನೆಯ ಅಂದರೆ ಕೊನೆಯ ಪದ್ಯದಲ್ಲಿ ಕವಿಯು ಖಿನ್ನತೆಯ ಗುಣ ಸ್ವಭಾವಗಳ ಮೇಲೆ ಬೆಳಕು ಚೆಲ್ಲುವನು.

ಖಿನ್ನತೆಯ ಮಾನಸಿಕ ಜನ್ಮ ಹಾಗೂ ಇತರ ಭಾವನೆಗಳೊಂದಿಗೆ ಅದರ ಸಂಬಂಧವನ್ನು ವಿವರಿಸುತ್ತಾನೆ. ಖಿನ್ನತೆಯ ಅಧಿದೇವತೆಯೂ ಸೌಂದರ್ಯದ ಅಧಿದೇವತೆಯೂ ವಾಸಿಸುವುದು ಒಂದೇ ಗರ್ಭಗುಡಿಯಲ್ಲಿ. ಆದರೆ ಸೌಂದರ್ಯಾಧಿದೇವತೆಯು ಸ್ವಭಾವತಃ ಅಲ್ಪ ಜೀವಿ. ಅಂತೆಯೇ ಆನಂದ ದೇವನಂತೂ ಸದಾ ಮನೋದೇವಾಲಯದಿಂದ ಹೊರಡುವುದಕ್ಕೇ ಸಿದ್ಧನಾಗಿರುವನು. ಇಂದ್ರಿಯಗಳಿಂದ ಉಂಟಾಗುವ ಸುಖವಂತೂ ಕ್ಷಣಿಕ. ಈ ಅಲ್ಪ ಕಾಲದ ಸುಖಸಂತೋಷಗಳೊಂದಿಗೇ ಖಿನ್ನತೆಯು ಮನಸ್ಸಿನಲ್ಲಿ ಮುಸುಕು ಹಾಕಿಕೊಂಡು ಸದಾ ಇದ್ದೇ ಇರುವುದು. ದ್ರಾಕ್ಷಿ ಹಣ್ಣಿನ ರುಚಿಯನ್ನು ಆಸ್ವಾದಿಸುವವನಿಗೆ ಅದಕ್ಕಾಗಿ ಪಡಬೇಕಾದ ಶ್ರಮದ ಯಾತನೆಯ ಅನುಭವವು ತಿಳಿದೇ ಇರುವುದು. ಮಾನವನ ಸಕಲ ಸುಖದುಃಖಗಳೂ ಹಾಗೆಯೇ. ಆನಂದ-ಖಿನ್ನತೆಗಳು, ನೋವು-ನಲಿವುಗಳು ಒಂದೆಡೆಯೇ ಇರುವುದರಿಂದ ಆನಂದವನ್ನು ಆಸ್ವಾದಿಸುವವನು ಖಿನ್ನತೆಯನ್ನೂ ಅನುಭವಿಸಲೇಬೇಕಾಗುವುದು. ಸುಖದ ಪೂರ್ಣ ಅನುಭವವನ್ನು ಪಡೆದವನೇ ದುಃಖದ ಕಹಿಯನ್ನು ಚೆನ್ನಾಗಿ ಮೆಚ್ಚಬಲ್ಲ; ಅಂದರೆ ದುಃಖವು ಸುಖಕ್ಕೆ ಪೂರಕ ಎಂಬ ತತ್ವವನ್ನು ಸಾರಿ ಕವಿ ಪ್ರಗಾಥವನ್ನು ಅಂತ್ಯಗೊಳಿಸುತ್ತಾನೆ.

ಈ ಪ್ರಗಾಥವು ಕೀಟ್ಸನ ಇತರ ಪ್ರಗಾಥಗಳ ಗುಣಲಕ್ಷಣಗಳನ್ನೇ ಹೊಂದಿದೆ. ಅವುಗಳಲ್ಲಿರುವಂತೆ ಇದರಲ್ಲಿಯೂ ಸುಂದರ ಶಬ್ದ ಚಿತ್ರಗಳಿಗೇನೂ ಕಡಿಮೆಯಿಲ್ಲ. ಈ ಪ್ರಗಾಥದ ಎರಡನೇ ಪದ್ಯವು ಅಂತ್ಯದಲ್ಲಿ ಸ್ವಲ್ಪ ಅಪಸ್ವರವನ್ನು (ಖಿನ್ನತೆಯನ್ನು ಹಗುರ ಮಾಡಿರುವುದು) ನುಡಿದರೂ ಒಟ್ಟಿನಲ್ಲಿ ಕವನದ

ಸೊಬಗಿಗೆ ಆದರಿಂದ ಕುಂದು ಉಂಟಾಗಿಲ್ಲ. ಇಲ್ಲಿಯೂ ತನ್ಮಯತೆಯನ್ನು ಸೂಚಿಸಲು — "ಎಡ್" ಎಂದು ಕೊನೆಯಲ್ಲಿ ಬರುವ ಎರಡು ಮಾತ್ರಾ ಕಾಲದ ಪದಗಳ (ಉದಾ: ಗ್ಲೋಬೆಡ್ ಪಿಯೊನೀಸ್ Globed peones) ಪ್ರಯೋಗವಿದೆ. ಅಂತೆಯೇ ಕೀಟ್ಸನಿಗೆ ಪ್ರಿಯವಾಗಿದ್ದ ಸಂಯುಕ್ತ ಗುಣವಾಚಕಗಳ (Compound epithets) ಪ್ರಯೋಗವನ್ನೂ ನಾವು ಕಾಣಬಹುದು: ಭದ್ರವಾಗಿ ಬೇರು ಬಿಟ್ಟ (Tight-rooted), ಬಾಗಿದ ಶಿರಗಳುಳ್ಳ (Droop-headed). ಇಷ್ಟಲ್ಲದೆ ಕವನದ ಭವ್ಯ ಶೈಲಿ, ಅವ್ಯಕ್ತ ವಿಚಾರಗಳನ್ನು ಇಂದ್ರಿಯ ಪ್ರಪಂಚದ ಚಿತ್ರಗಳನ್ನಾಗಿ ತೋರಿಸಿರುವುದು, ಪುರಾಣ ಹಾಗೂ ಸಂಕೇತಗಳ ಸುಂದರ ಪ್ರಯೋಗ — ಇವೆಲ್ಲಾ ಈ ಪ್ರಗಾಥಕ್ಕೆ ಹೆಚ್ಚಿನ ಮೆರುಗು ಕೊಟ್ಟಿವೆ.

ಇದು ವಿಮರ್ಶಕರ ಮೆಚ್ಚಿಗೆಗೂ ಪಾತ್ರವಾಗಿದೆ. ಎಲ್ಲರ್ ಶಾ ಹೇಳುವಂತೆ "ಇಂದ್ರಿಯಗಳಿಂದ ಗುರುತಿಸಬಹುದಾದ ಹೊರ ಸೌಂದರ್ಯವೇ ಕಾವ್ಯದ ಗುರಿ ಎಂದು ಕೀಟ್ಸ್ ತಿಳಿದು ಕೊಂಡಿರಲಿಲ್ಲ. ದುಃಖದ ಹಾಗೂ ಸುಖದ ಸೌಂದರ್ಯದ ಮೇಲೆ ಅವನ ದೃಷ್ಟಿಯಿತ್ತು. ರಾಬರ್ಟ್ ಬ್ರಿಜಸ್‌ನಿಗಾದರೋ "ಈ ಪ್ರಗಾಥದಲ್ಲಿ ವೀಕ್ಷಣೆಯು ಆಳವಾದದ್ದು ಹಾಗೂ ಅನುಭವ ದಿಂದ ಉಂಟಾದದ್ದು......" ಎಂದು ಅನಿಸಿತಂತೆ. "ಗ್ರೀಕ್ ಕರಂಡದ ಮೇಲಿನ ಪ್ರಗಾಥ"ದಲ್ಲಿ ಸಾಂಪ್ರದಾಯಿಕ ತತ್ವವನ್ನು ಕಂಡ ಗ್ಯಾರಡ್ ಎಂಬ ವಿಮರ್ಶಕನು ಇದರಲ್ಲಿ ವಿಪರೀತವಾದ ಬುದ್ಧಿ ಕೌಶಲ್ಯವನ್ನು ಕಾಣುವನು. ಅಲ್ಲದೆ ಈ ಪ್ರಗಾಥವನ್ನು ಓದಿದ ಫ್ರೆಡ್ ಇಂಗ್ಲಿಷ್ ಎಂಬುವನಿಗೆ ನೋವುನಲಿವುಗಳನ್ನೂ ಸುಖ-ದುಃಖಗಳನ್ನೂ ಬೇರ್ಪಡಿಸಲು ಸಾಧ್ಯವಿಲ್ಲವೆಂಬ

ಸತ್ಯದ ದರ್ಶನವಾಗಿದೆ. ಅಲ್ಲದೆ ನಾವು ಕವನದಲ್ಲಿ ಕಾಣುವಂತೆ ಸೌಂದರ್ಯದ ಹಾಗೂ ಆನಂದದ ಕ್ಷಣಿಕತೆಯಿಂದ ಖಿನ್ನತೆಯು ಮಾನವನ ಶಾಶ್ವತ ಹಾಗೂ ಮುಖ್ಯ ಅಂಗವಾಗಿದೆ. ಒಬ್ಬನ ಹೆಚ್ಚಿನ ಅನುಭವ ಪಡೆದ ಇಂದ್ರಿಯಸುಖದ ಕ್ಷಣಗಳಿಗೆ ಈ ಖಿನ್ನತೆಯು ಅವಶ್ಯವಾಗಿ ಪೂರಕವಾಗಿರುವುದು.

9. ಅಲಸಿಕೆಯ ಮೇಲಿನ ಪ್ರಗಾಥ

‘ಗ್ರೀಸಿಯನ್ ಅರ್ನ್’ ಮತ್ತು ‘ಸೈಕಿ’ಗಳ ಮೇಲಿನ ಪ್ರಗಾಥಗಳನ್ನು ಕೀಟ್ಸನ ಗ್ರೀಕ್ ಪ್ರಗಾಥಗಳೆಂದೂ, ‘ಮೆಲಾಂಕಲಿ’ ಮತ್ತು ‘ನೈಟಿಂಗೇಲ್’ಗಳ ಮೇಲಿನ ಪ್ರಗಾಥಗಳನ್ನು ಕವಿಯ ಮಾನಸಿಕ ಸ್ಥಿತಿಯ ಪ್ರಗಾಥಗಳೆಂದೂ ಎರಡು ಗುಂಪುಗಳನ್ನಾಗಿ ಮಾಡುವುದಾದರೆ, ಈ ‘ಅಲಸಿಕೆಯ ಮೇಲಿನ ಪ್ರಗಾಥ’ (Ode on Indolence) ವು, ರಚನೆಯ ಕಾಲದಲ್ಲಲ್ಲದಿದ್ದರೂ, ಭಾವನೆಯಲ್ಲಿ ಎರಡು ಗುಂಪುಗಳ ನಡುವೆ ನಿಲ್ಲುವುದು. ಕೀಟ್ಸನೇ ಹೇಳುವಂತೆ ಇದನ್ನು ಬರೆದದ್ದು, “ರಾತ್ರಿ ಹನ್ನೊಂದರವರೆಗೂ ನಿದ್ದೆ ಮಾಡಿ, ತನ್ನ ಭಾವೋದ್ರೇಕಗಳೆಲ್ಲಾ ಸುಪ್ತವಾಗಿದ್ದಾಗ”; ಅಂದರೆ ಇಂತಹ ಪೂರ್ಣ ಮಾನಸಿಕ ನಿಷ್ಕ್ರಿಯಾವಸ್ಥೆಯಲ್ಲೇ, ಸೋಮಾರಿತನ ಮೂಡಿದಾಗ ಕವಿಯ ಲೇಖನಿಯಿಂದ ಹೊರಹೊಮ್ಮಿದ ಪ್ರಗಾಥವಿದು. ಇದರಲ್ಲಿ 10 ಸಾಲುಗಳ ಆರು ಪದ್ಯಗಳಿವೆ.

‘‘ಅವರು ಶ್ರಮಪಡುವುದೂ ಇಲ್ಲ, ನೂಲು ತೆಗೆಯುವುದೂ ಇಲ್ಲ’’ (They toil not, neither do they spin) ಎಂಬ ಮಾತು ಈ ಪ್ರಗಾಥದ ಪ್ರಾರಂಭದಲ್ಲಿ ಬರುತ್ತದೆ; ಅದು ಕವನದ ವಸ್ತುವಿಗೆ ಒಳ್ಳೆಯ ಪೀಠಿಕೆಯಂತಿದೆ. ಒಂದು ಮುಂಜಾನೆ ಮೂರು ಆಕೃತಿಗಳು ಕವಿಯ ಕಣ್ಣಿಗೆ ಬೀಳುವುವು. ಅವು ತಮ್ಮ ಕತ್ತುಗಳನ್ನು ಬಗ್ಗಿಸಿ, ಕೈಗಳನ್ನು ಜೋಡಿಸಿ ಪಕ್ಕಕ್ಕೆ ಮುಖ ತಿರುಗಿಸಿಕೊಂಡಿರುವುವು. ಶ್ವೇತವಸ್ತ್ರಧಾರಿ

ಗಳಾದ ಆ ಆಕೃತಿಗಳು ಅಮೃತ ಶಿಲೆಯ ಮೇಲಿನ ಆಕೃತಿಗಳಂತೆ ಚಲಿಸುತ್ತಿವೆ. ಅವು ಎರಡನೇ ಬಾರಿ ಬಂದಾಗ ಕವಿ ಕೇಳುತ್ತಾನೆ: "ಇದೇನು ? ಛಾಯೆಗಳೇ, ನೀವು ವೇಷಮರೆಸಿಕೊಂಡು ಬಂದಿರುವುದೇತಕ್ಕೆ ? ನನ್ನ ಅಲಸಿಕೆಯ ದಿನಗಳನ್ನು ಕದಿಯ ಲೆಂದೇ ?...ನನ್ನ ಪ್ರಜ್ಞೆಯಲ್ಲಿನ ಶೂನ್ಯತೆಯನ್ನು ನೀವು ಏಕೆ ಹಾಗೆಯೇ ಇರಲು ಬಿಡಬಾರದು ?"

ಆಕೃತಿಗಳು ಮೂರನೇ ಬಾರಿ ಬಂದಾಗ, ಅವುಗಳು ಕ್ಷಣಮಾತ್ರ ಕವಿಯ ಕಡೆಗೆ ಮುಖಮಾಡಿ ಮರೆಯಾಗುವುವು (ಬಹಳ ಕಾಲ ಅವು ಕವಿಯನ್ನು ದೃಷ್ಟಿಸಿ ನೋಡಲಾರವು). ಕವಿ ಆ ಮೂರು ಆಕೃತಿಗಳನ್ನೂ ಬಲ್ಲ: ಮೊದಲನೆಯವಳು 'ಪ್ರೇಮ'ವೆಂಬ ಸುಂದರ ಕನ್ಯೆ; ಆಯಾಸಭರಿತ ಅಕ್ಷಿಗಳಿಂದ ಸದಾ ಜಾಗ್ರತಳಾಗಿರುವ 'ಆಸೆ' ಎಂಬುವಳು ಎರಡನೆಯವಳು; ಮೂರನೆಯವಳು 'ಕವಿತೆ'ಯೆಂಬ ರಾಕ್ಷಸಿ — ಇವಳನ್ನು ಕವಿ ಪ್ರೀತಿಸಿದಷ್ಟೂ ಅವಳ ಮೇಲಿನ ದೋಷಾರೋಪಣೆ ಹೆಚ್ಚು ತ್ತದೆ. ಅವು ಕಣ್ಮರೆಯಾದರೆ ಕವಿಗೆ ವ್ಯಥೆಯಿಲ್ಲ; ಏಕೆಂದರೆ ಪ್ರೇಮ, ತಾತ್ಕಾಲಿಕ ಸ್ವಭಾವವುಳ್ಳ ಆಸೆ ಹಾಗೂ ಆನಂದರಹಿತ ಕವಿತೆಗಳೆಲ್ಲಿ ? ಕವಿಯ ಸುಮಧುರ ಅಲಸಿಕೆಯೆಲ್ಲಿ ? ಕವಿಯ ಮಾನಸಿಕ ನಿಷ್ಕ್ರಿಯತೆಯಿಂದ ಉಂಟಾಗುತ್ತಿರುವ ಆನಂದವನ್ನು ಇವಾವುವೂ ಭ್ರಷ್ಟಗೊಳಿಸಲಾರವು.

ಪುನಃ ಆ ಆಕೃತಿಗಳ ದರ್ಶನ ! ಇವೆಲ್ಲಿ ಮತ್ತೆ ಬಂದು ವೆಂದು ಕವಿಗೆ ಆತಂಕ ! ಅವನ ನಿದ್ರೆ ಸ್ವಪ್ನ ಮಿಶ್ರಿತವಾಗಿದ್ದು, ಅವನ ಆತ್ಮವು ಪುಷ್ಪಗಳು, ಛಾಯೆಗಳು ಹಾಗೂ ಬೆಳಕಿನಿಂದ ತುಂಬಿದ ಹುಲ್ಲು ಮೈದಾನದಂತೆ ಇದೆ. ಬೆಳಗಿನ ಸಮಯ

ವಾದಾಗ, ಆಕಾಶವು ಮೇಘಾಚ್ಛಾದಿತವಾಗಿದ್ದರೂ ಮೇ ತಿಂಗಳ ಆನಂದಬಾಷ್ಪವಿಲ್ಲ. ಅಂತೆಯೇ ಕವಿಯ ಕಣ್ಣುಗಳಿಂದಲೂ ಆ ಆಕೃತಿಗಳ ಉಡುಪಿನ ಮೇಲೆ ಒಂದು ತೊಟ್ಟು ನೀರೂ ಬಿದ್ದಿಲ್ಲ. ಕವಿ ಆ ಛಾಯೆಗಳನ್ನು ಬೀಳ್ಕೊಡಲು ಇದು ಸುಸಮಯ. ಕೊನೆಯಲ್ಲಿ ಕವಿ ಆ ಮೂರು 'ಭೂತ'ಗಳನ್ನು ಸಂಬೋಧಿಸಿ ಅವುಗಳನ್ನು ಬೀಳ್ಕೊಡುತ್ತಾನೆ: "ನೀವು ನನ್ನನ್ನು ಸಂವೇದನಾಯುಕ್ತ ಪ್ರಹಸನದಲ್ಲಿ ಬರುವ ಮುದ್ದು ಕುರಿಮರಿಯಂತೆ ಹೊಗಳಿ ಪ್ರೇರೇಪಿಸಲಾರಿರಿ. ನೀವು ಕಣ್ಮರೆಯಾಗಿ ಒಂದು ಕರಂಡದ ಮೇಲ್ಲಿನ ಚಿತ್ರಗಳಂತೆ ಮಾತ್ರ ನಿಮ್ಮ ನೆನಪು ಉಳಿಯಬಹುದು. ನನಗೆ ಹಗಲು-ರಾತ್ರಿ ದರ್ಶನವಾಗುವುದು. ಹೊರಟು ಹೋಗಿ. ಇನ್ನು ಮೇಲೆ ಬರಲೇ ಬೇಡಿ."

ಸಿಡ್ನಿ ಕಾಲ್ವಿನ್ ಹೇಳುವಂತೆ, ಈ ಪ್ರಗಾಥದಲ್ಲಿನ ರಚನಾಕೌಶಲ್ಯ ಇತರ ಪ್ರಗಾಥಗಳಲ್ಲಿರುವುದಕ್ಕಿಂತ ಕಡಿಮೆ ದರ್ಜೆಯದು. ಪ್ರಗಾಥದ ಪದ್ಧತಿಯಂತೆ ಸಾಮಾನ್ಯವಾಗಿ ಬರಬೇಕಾದ ಸಂಬೋಧನೆ ಮೂರು ಪದ್ಯಗಳಲ್ಲಿ ಮಾತ್ರ ಬರುವುದು. ಈ ಪ್ರಗಾಥವನ್ನು ಓದುವಾಗ ನಮಗೆ ನೆನಪಾಗುವುದು, ಬಾರ್ಲಿ ಎಂಬುವನು ಬರೆದ ಪತ್ರಕ್ಕೆ ಸಂಬಂಧಿಸಿದಂತೆ ಕೀಟ್ಸನ ಉದ್ಗಾರ: "ವಿಚಾರಭರಿತ ಜೀವನಕ್ಕಿಂತ ಸಂವೇದನಾಮಯ ಜೀವನವಿದ್ದರೆ ಎಷ್ಟು ಚೆಂದ"! (O for a life of sensations rather than of thought!) ಟೆನಿಸನ್‌ನ 'ಪದ್ಮ ಫಲಭಕ್ಷಕ' (Lotus - Eaters) ರಿಗಿಂತ ಒಂದು ಹೆಜ್ಜೆ ಮುಂದೆ ಹೋಗುವ ಕವಿಗೆ ದೈಹಿಕ ಹಾಗೂ ಮಾನಸಿಕ ಕ್ರಿಯೆಯೂ ಬೇಡವಾಗಿ ಆ ಶೂನ್ಯಸ್ಥಿತಿಯ ವಿಶೇಷ

ಆನಂದವನ್ನು ಪಡೆಯಲು ಹವಣಿಸುವನು. ಪ್ರೇಮ, ಆಸೆ, ಕಾವ್ಯರಚನೆ ಇವಾವುದೂ ಕವಿಯನ್ನು ಅಲಸಿಕೆಯ ಆನಂದದಿಂದ ವಿಮುಖಗೊಳಿಸಲಾರದು.

10. ಭಾವೋದ್ರೇಕದ ಹಾಗೂ ಆನಂದದ ಗಾಯಕರು

ಕೀಟ್ಸನ "ಬಾರ್ಡ್ಸ್ ಆಫ್ ಪ್ಯಾಶನ್ ಎಂಡ್ ಆಫ್ ಮರ್ತ್" ಎಂಬುದು ಪುನರುಕ್ತಿಯೂ ಸೇರಿ ಒಟ್ಟು 40 ಸಾಲುಗಳುಳ್ಳ ಪ್ರಗಾಥ. ಕವಿಗಳು ಕಾವ್ಯರಚನೆಯಿಂದ ಹೇಗೆ ಅಮರರಾಗಬಲ್ಲವರೆಂಬುದನ್ನು ಇದು ವಿವರಿಸುತ್ತದೆ. ಕೀಟ್ಸ್ ಹೇಳುವಂತೆ, ಕವಿಗಳು ಭಾವೋದ್ರೇಕವನ್ನೂ, ಉಲ್ಲಾಸವನ್ನೂ ಕುರಿತು ಹಾಡಿದವರು. ಅವರು ಗತಿಸಿದ್ದರೂ ಅವರ ಜೀವಾತ್ಮಗಳು ಭೂಮಿಯ ಮೇಲೂ, ಸ್ವರ್ಗದಲ್ಲೂ ಇರುವುವು. ಸ್ವರ್ಗದಲ್ಲಿರುವ ಜೀವಾತ್ಮಗಳು ಸೂರ್ಯ ಚಂದ್ರರ ಗೋಳಗಳೊಡನೆ ಸಂಪರ್ಕ ಹೊಂದಿರುವುವು. ಅಲ್ಲಿ ಅವರು ಆನಂದಿಸುವ ಅನುಭವಗಳೆಂದರೆ, ಆಶ್ಚರ್ಯಜನಕ ಚಿಲುಮೆಗಳ ದನಿ, ಗುಡುಗಿನಂತಹ ಶಬ್ದಗಳು, ಸ್ವರ್ಗದ ವೃಕ್ಷಗಳ ಪಿಸುಗುಟ್ಟುವಿಕೆ. ಆ ಜೀವಾತ್ಮಗಳು ಆರಾಮವಾಗಿ ಕುಳಿತುಕೊಳ್ಳುವ ಸ್ಥಳ ಸ್ವರ್ಗೀಯ ಹುಲ್ಲುಗಾವಲುಗಳು. ಅಲ್ಲಿ ಅವರಿಗೆ ದೊರಕುವುದು ಡಯಾನಾ ದೇವತೆಯ ಜಿಂಕೆಗಳ ಆಹಾರ; ನೀಲಿಗಂಟೆ ಹೂಗಳ ಸೊಬಗು; ಭೂಮಿಯ ಮೇಲೆ ಸಿಗದ, ಗುಲಾಬಿಯಂತಹ ಪುಷ್ಪಗಳ ಪರಿಮಳ. ಅಲ್ಲಿ ನೈಟಿಂಗೇಲ್ ಹಕ್ಕಿಗಳು ಹಾಡುವುದು ಅರ್ಥವಿಲ್ಲದ ಭಾವೋದ್ವೇಗದ ವಿಚಾರವನ್ನು ಕುರಿತಲ್ಲ. ದಿವ್ಯ, ಮಧುರ, ಸತ್ಯ ಸುಗಮವಾಗಿ ಓಡುವ ತತ್ವಪೂರ್ಣ ಸಾಲುಗಳು, ಸ್ವರ್ಗಲೋಕದ ಕತೆಗಳ ಹಾಗೂ

ಇತಿಹಾಸ, ಅದರ ಅದ್ಭುತಗಳು ಆ ಹಕ್ಕಿಗಳ ಕಂಠದಿಂದ ಹೊರ ಹೊಮ್ಮುವುವು. ಇಂತಿರುವುದು ಕವಿಗಳ ಜೀವಾತ್ಮಗಳ ಸ್ವರ್ಗವಾಸ.

ಆ ಜೀವಾತ್ಮಗಳು ಭೂಮಿಯ ಮೇಲೂ ಹೇಗೆ ವಾಸಿಸುವುವು ಎಂಬುದನ್ನು ಕೀಟ್ಸನು ಈ ಕವನದ ಎರಡನೇ ಭಾಗದಲ್ಲಿ ವಿವರಿಸುವನು. ಈತನ ಪ್ರಕಾರ, ಕವಿಗಳು ಸ್ವರ್ಗಸ್ಥರಾದ ಮೇಲೆ ಈ ಭೂಮಿಯ ಮೇಲೆ ಬಿಟ್ಟು ಹೋಗುವ ಅವರ ಜೀವಾತ್ಮಗಳಿಂದ ಅವರನ್ನು ಹುಡುಕುವ ನಿಜವಾದ ಮಾರ್ಗ ತಿಳಿಯುವುದು ; ಹಾಗೆಯೇ ಅವರ ಉಳಿದ ಆತ್ಮಗಳು ಅವಿಶ್ರಾಂತವಾಗಿ ಆನಂದವನ್ನು ಅನುಭವಿಸುವ ಜಾಗವೂ ಗೊತ್ತಾಗುವುದು. ಇಲ್ಲಿರುವ ಅವರ ಜೀವಾತ್ಮಗಳು ಇಲ್ಲಿ ಮನುಷ್ಯರಿಗೆ ತಮ್ಮ ನಾನಾ ಅನುಭವಗಳ ಬಗೆಗೆ ಹೇಳುವುವು– ಅವರ ಅಲ್ಪಾವಧಿ ಜೀವನ ; ತಮ್ಮ ಸುಖದುಃಖಗಳು, ತಮ್ಮ ಭಾವೋದ್ರೇಕಗಳು ಹಾಗೂ ಈರ್ಷ್ಯೆ, ಅಸೂಯೆಗಳು ; ತಮ್ಮ ಬಲವನ್ನು ಹೆಚ್ಚಿಸುವ ಮತ್ತು ಕುಗ್ಗಿಸುವ ಅಂಶಗಳು. ಹೀಗೆ ಕವಿಗಳು ಈ ಜಗತ್ತಿನಿಂದ ದೂರವಾಗಿ ಹೊರಟು ಹೋಗಿದ್ದರೂ, ಇಲ್ಲಿರುವ ಅವರ ಜೀವಾತ್ಮಗಳು ದಿನವೂ ನಮಗೆ ವಿವೇಕವನ್ನು ಬೋಧಿಸುವುವು. (ಕವನದ ಕೊನೆಯಲ್ಲಿ ನಾಲ್ಕು ಸಾಲುಗಳ ಪುನರಾವೃತ್ತಿಯಾಗಿದೆ).

ಹೀಗೆ ಕೀಟ್ಸನು ಹೇಳುವಂತೆ ಕವಿಗಳ ನಿಜವಾದ ಆತ್ಮ ಇರುವುದು ಅವರ ಕೃತಿಗಳಲ್ಲಿ. ಅವುಗಳಿಗೆ ಮರಣವೆಂಬುದೇ ಇಲ್ಲ. ಕವಿಗಳು ಕಣ್ಮರೆಯಾದರೂ ಈ ಕೃತಿಗಳು ಮುಂದೆ, ಮುಂದಿನ ಜನಾಂಗಗಳಿಗೆಲ್ಲಾ ಅಮರ ಸತ್ಯವನ್ನು ನೀಡುತ್ತಾ

ಹೋಗುವುವು. ಅಂದರೆ ಕವಿಗಳು ಅಮರರಾಗುವರು. ಚಾಪ್‌ಮನ್, ಬೈರನ್ ಮತ್ತು ಸ್ಪೆನ್ಸರ್ ಕವಿಗಳ ಮೇಲೆ ಕೀಟ್ಸನೇ ರಚಿಸಿರುವ ಕವನಗಳು ಕವಿಗಳ ಅಮರತ್ವವನ್ನು ಎತ್ತಿ ತೋರಿಸುವುವು.

ಗ್ರಂಥಋಣ

1.	H. Buxton Forman	The Poetical Works of John Keats (Ed.) : O.U.P. 1917.
2.	Lord Houghton	The Poetical Works of John Keats (Ed.) : London, Bell & Sons 1914.
3.	Sidney Colvin	Keats : London, Macmillan 1916.
4.	B. M. Srikantia	A Handbook of Rhetoric : Mysore 1919
5.	Sir Paul Harvey	Oxford Companion to English Literature: O.U.P. 1962.
6.	Arthur Compton-Rickett	A History of English Literature : London, Thomas Nelson & Sons 1956.
7.	B. Prasad	A Background to the Study of English Literature : Macmillan 1969.

8. S. Ananthanarayana — ಕನ್ನಡದ ಮೇಲೆ ಇಂಗ್ಲಿಷ್ ಸಾಹಿತ್ಯದ ಪ್ರಭಾವ

9. C. B. Young and K. R. Srinivasa Iyengar — Standard English Poems (Ed.) : O.U.P. 1967.

ಪ್ರಚಾರೋಪನ್ಯಾಸ ಮಾಲೆ

1.	ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2.	ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3.	ಭಯ-ಸರಳ ವಿಶ್ಲೇಷಣೆ	ಎಂ. ಶಿವರಾಂ
4.	ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5.	ಶಾಂತಿನಾಥ ಕವಿ	ಕಮಲಾ ಹಂಪನಾ
6.	ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
7.	ಬಯಲಾಟಗಳು	ಚಂದ್ರಶೇಖರ ಕಂಬಾರ
8.	ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
9.	ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
10.	ಉಪಭಾಷೆ	ಕೃಷ್ಣ ಪರಮೇಶ್ವರ ಭಟ್ಟ
11.	ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
12.	ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚನ್ನಬಸಪ್ಪ
13.	ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
14.	ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
15.	ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
16.	ವಿವಾಹ ಪದ್ಧತಿಗಳು	ಎಸ್. ಕೆ ರಾಮಚಂದ್ರರಾವ್
17.	ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
18.	ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿಶೆಟ್ಟಿ
19.	ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
20.	ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
21.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
22.	ಕುರುಡು	ಎಸ್. ಟಿ. ಪುಟ್ಟಣ್ಣ
23.	ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
24.	ಕ್ಷಯ	ಎಂ. ಬಸವರಾಜೆ ಅರಸು
25.	ಮೂತ್ರಪಿಂಡದ ಕೆಲವು ರೋಗಗಳು	ಎಂ. ಬಸವರಾಜೆ ಅರಸು
26.	ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
27.	ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
28.	ಅಂತರ್ಜಲ	ಸಿ. ನಾಗಣ್ಣ
29.	ಪಂಪ	ತ. ಸು. ಶಾಮರಾಯ
30.	ದೇಹರಚನೆ ಹಾಗೂ ಮೂಳೆಗಳು	ಎಸ್. ಬಿ. ವಸಂತ ಕುಮಾರ್
31.	ಶ್ರೀನಿವಾಸ ರಾಮಾನುಜನ್	ಜಿ. ಟಿ. ನಾರಾಯಣರಾವ್
32.	ಮಹಾಕವಿ ಕುಮಾರನಾಶಾನ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲಕ್ಷ್ಮಿ
33.	ತುಳ್ಳಲ್‌ಕವಿ ಕುಂಜನ್ ನಂಬಿಯಾರ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲಕ್ಷ್ಮಿ
34.	ಪರಾಮಾನಸಶಾಸ್ತ್ರ	ಎಸ್. ಕೆ. ರಾಮಚಂದ್ರರಾವ್